
ಕಲ್ಯಾಣ ಕಿರಣ

ಫೆಬ್ರವರಿ - 2002 ಬೆಲೆ : ರೂ. 5-00





ಕೃಷಿ ವಿಚಾರ ಸಂಕಿರಣ ಉದ್ಘಾಟನೆ ಶರಣ. ಸಿ.ಬಿ.ಬೇವನೂರ ಅವರಿಂದ. ಉಪನ್ಯಾಸಕರಾದ ಆರ್.ಎಸ್. ಪಾಟೀಲ್, ಸುರೇಶಗೌಡ ಪಾಟೀಲ, ಸಭಾಧ್ಯಕ್ಷ ಶಂಕರಪ್ಪ ಮಹಾಂತಗೋಳ್ ಚಿತ್ರದಲ್ಲಿದ್ದಾರೆ.



ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಕಲ್ಯಾಣ ಪರ್ವಕ್ಕೆ ಕರೆ

ಬನ್ನಿ ಮಹಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ॥
ಮಹಮನೆಯ ಭಕ್ತಿ ಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ.ಪ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮ ಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥1॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ-ಮಧುವಯ್ಯ- ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2॥

ಇಂಥ ಮಹಮನೆಯು ಜಗದಲೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥3॥

ಕಲ್ಯಾಣ ಮಹಮನೆಯು ಮರುಹುಟ್ಟು ಪಡೆಯುತಿದೆ
ಶರಣರ ಸಂಸ್ಕೃತಿಯು ವೈಭವವ ಮೆರೆಸಲಿದೆ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವಪ್ರೇಮ ಸಾರುತಿಹುದು ॥ 4॥

ಹುಟ್ಟಿನಿಂದಲಿ ನೀವು ಏನೆ ಇರಬಹುದು
ಸಧ್ಯದ ಗುಣದಲ್ಲಿ ಹೇಗೇ ಇರಬಹುದು
ಕಲ್ಯಾಣ ಪರ್ವಕೆ ಬರಲುಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5॥

- ಮಾತಾಜಿ

ಕಲ್ಯಾಣ ಕಿರಣ

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ.

ಸಂಚಿಕೆ 11 | ಫೆಬ್ರವರಿ 2002 | ವಾರ್ಷಿಕ ಚಂದಾ 50/- ರೂ.

ಕಲ್ಯಾಣ ಕಿರಣದ ಮುಖಪುಟ : ಚಿನ್ಮಯ ಜ್ಞಾನಿ ಚನ್ನಬಸವಣ್ಣ

KALYANA KIRANA -Reg No. 19988/70. Magazine printed and published by B. Shambhulingaiah, printed at Aksharographics, A.D. Halli, Vijayanagar, Bangalore - 560 040. Phone : 3304131, 3382935

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ:
ದೂರವಾಣಿ: 3325335 / 3322790

ಬಸವ ಮಂಟಪ
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕು,
ರಾಜಾಜಿನಗರ, ಬೆಂಗಳೂರು - 560 010.

ಕಲ್ಯಾಣ ಪರ್ವ ಕಾರ್ಯಕ್ರಮ

ಕೈ ಜೋಡಿಸಲು ಶರಣಬಂಧುಗಳಿಗೆ ಕರೆ

- ಮಾತಾಜಿ

ಬಸವ ಕಲ್ಯಾಣದಲ್ಲಿ ಒಂದು ಮಠವನ್ನು ಮಾಡಬೇಕು. ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಬೇಕು ಎಂಬುದು ಬಹುಕಾಲದ ಬಯಕೆ ಲಿಂಗೈಕ್ಯ ಪೂಜ್ಯ ಅಪ್ಪಾಜಿಯವರಲ್ಲಿ ಇತ್ತಾದರೂ ಅವರಿದ್ದ ಕಾಲದಲ್ಲಿ ಅದು ಕೈಗೂಡಲಿಲ್ಲ. ಅತ್ಯಂತ ಅನಿರೀಕ್ಷಿತವಾಗಿ ದಿ. 21-12-2001ರಂದು 3 ಎಕರೆ ಜಾಗವನ್ನು ಬಸವ ಧರ್ಮಪೀಠ ಟ್ರಸ್ಟ್‌ವತಿಯಿಂದ ಖರೀದಿಸಿದೆವು. ಮಾತಾಜಿ ಎಲ್ಲಾ ಕಡೆ ಮಾಡಲು ಹೋಗುತ್ತಾರೆ. ವೃಥಾ ಶ್ರಮ ಪಡುತ್ತಾರೆ, ತ್ರಾಸು ಮಾಡಿಕೊಳ್ಳುತ್ತಾರೆ'' ಎಂದು ಕೆಲವು ಆತ್ಮೀಯರ ಆಕ್ಷೇಪ. ನಿಜ, ಆದರೆ ಕರ್ತವ್ಯ ಕೈ ಬೀಸಿ ಕರೆಯುತ್ತದೆ. ಅದರ ಒತ್ತಡವನ್ನು ತಡೆದುಕೊಳ್ಳಲು ಆಗುವುದಿಲ್ಲ. ಕೂಡಲ ಸಂಗಮವನ್ನು 1987ನೆಯ ಇಸವಿ ಜುಲೈ ತಿಂಗಳಲ್ಲಿ ಸಂದರ್ಶಿಸಲು ಬಂದಾಗ, ಅದೂ ವೀರಶೈವ ಮಹಾಸಭಾಧ್ಯಕ್ಷರಾದ ಲಿಂ ॥ ಶರಣ ಐ.ಎಂ. ಮಗದುಂ ಅವರ ಒತ್ತಾಯದ ಆಹ್ವಾನದ ಮೇರೆಗೆ ಬಂದು, ಪೂಜ್ಯ ಅಪ್ಪಾಜಿ ಮತ್ತು ನಾವು ನೋಡಿದಾಗ ಅಕ್ಷರಶಃ ಕಣ್ಣೀರು ಬಂದವು. ಅರ್ಧ ಕೀಳಲ್ಪಟ್ಟ ದೇವಾಲಯದ ಕಟ್ಟಡ, ಪಾಳುಬಿದ್ದ ಕೆಲವು ಮಂಟಪಗಳು ಸುತ್ತ ದಯನೀಯ ಸ್ಥಿತಿಯ ಅಂಗಡಿಯ ಗೂಡುಗಳು, ಅಲ್ಲೇ ಎಮ್ಮೆ-ಹಸು ಕಟ್ಟಿ ಕೊಳಕು ಮಾಡುತ್ತಿದ್ದ ಜನರು. ಒಂದು ಕೊಂಪೆಯನ್ನು ನೋಡಿದಂತೆ ಎನಿಸಿತು. ಲಿಂಗಾಯತ ಸಮಾಜ, ಶ್ರೀಮಂತ ಮಠಾಧೀಶರು, ಬಲಿಷ್ಠ ರಾಜಕೀಯ ಮುಂದಾಳುಗಳು, ದೊಡ್ಡದೊಡ್ಡ ವ್ಯಾಪಾರಸ್ಥರು, ಉದ್ಯಮಿಗಳು. ಇವರಿಂದ ತುಳುಕುತ್ತಿದ್ದರೂ , ಮೂರುವರೆ ಕೋಟಿ ಅನುಯಾಯಿಗಳಿರುವ ಬಸವಣ್ಣನವರ ಈ ಕ್ಷೇತ್ರ ಇಂಥ ದಯನೀಯ ಸ್ಥಿತಿಯೆ ?

ಅರಮನೆಯಂತಹ ಮನೆ ಕಟ್ಟಿಕೊಂಡು, ಎ.ಸಿ. ಕಾರಲ್ಲಿ ತಿರುಗಾಡುವ ಓರ್ವ ಐ.ಎ.ಎಸ್ ಅಥವಾ ಐ.ಪಿ.ಎಸ್ ಅಧಿಕಾರಿಯ ತಾಯಿ-ತಂದೆಯರು ಒಣಗಿ ಕರಕಲಾಗಿ, ರಸ್ತೆಯ ಪಕ್ಕದಲ್ಲಿ ಭಿಕ್ಷೆ ಬೇಡುತ್ತಿರುವುದನ್ನು ನೋಡಿದಾಗ ಎಂತಹ ದುಃಖವಾಗುವುದೋ ಅಂಥ ದುಃಖವು ನಮಗೆ ಆಗಿ, ಅಂದೇ ಕೂಡಲ ಸಂಗಮದ ಅಭಿವೃದ್ಧಿಗಾಗಿ ದುಡಿಯುವ ಸಂಕಲ್ಪ ತಳೆದು, ಒಂದು ಟ್ರಸ್ಟ್ ರಚಿಸಿ ಕಾರ್ಯೋನ್ಮುಖರಾದೆವು. ಜನರ ಸಹಕಾರದಿಂದಾಗಿ ಇಂದು ಸಮಾಧಾನಕರವೆನ್ನಿಸುವಂಥ ಕಾರ್ಯಸಾಧನೆ ಕೂಡಲ ಸಂಗಮದಲ್ಲಿ ಆಗಿರುವುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿ.

ಬಸವ ಕಲ್ಯಾಣವು ಅಷ್ಟೇ ಮಹತ್ವದ ತಾಣ. ಹೃದಯದಷ್ಟೇ ಮೆದುಳೂ ಎಷ್ಟು ಅಗತ್ಯವೋ ಹಾಗೆ, ಕೂಡಲ ಸಂಗಮದಷ್ಟೇ ಮಹತ್ವದ ತಾಣ ಬಸವ ಕಲ್ಯಾಣ. ಅದಕ್ಕಾಗಿ ಆದಿ ಶರಣರ ಸಂಕಲ್ಪ ಪೂರೈಸಲು ಅಲ್ಲೀಗ ಯೋಜನೆ ಹಾಕಬೇಕಾಗಿದೆ. ಕಟ್ಟಡಗಳನ್ನು ಕಟ್ಟುವ ಸ್ಥಾವರ ಕೆಲಸವು ಎಷ್ಟು ಅಗತ್ಯವೋ ಜಂಗಮ ಜ್ಯೋತಿಗಳಾದ ಆದಿ ಶರಣರ ಸಂಕಲ್ಪ ಪೂರೈಸುವುದು ; ಜಂಗಮ ಚೇತನಗಳಾದ ಇಂದಿನ ಶರಣ ಬಂಧುಗಳನ್ನು ಅಲ್ಲಿಗೆ ಬರಮಾಡಿಕೊಳ್ಳುವುದು, ಅಷ್ಟೇ ಅನಿವಾರ್ಯ ಅಗತ್ಯವಾಗಿದೆ. ಹೀಗಾಗಿ ಏಪ್ರಿಲ್ 30, ಮೇ

1-2 ರಂದು ಮೂರುದಿವಸಗಳ ಕಲ್ಯಾಣ ಪರ್ವ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿಯೊಬ್ಬ ಧರ್ಮಸ್ಥಾಪಕರ ಬದುಕಿನಲ್ಲಿ 3 ದಿವಸಗಳು ಅತ್ಯಂತ ಮಹತ್ವಪೂರ್ಣ 1. ಜನನ 2. ಧರ್ಮ ಸಂಸ್ಥಾಪನಾ ದಿನ 3. ಲಿಂಗೈಕ್ಯ. ಕೂಡಲ ಸಂಗಮದ ಶರಣ ಮೇಳಕ್ಕೆ ಲಿಂಗಾಯತ ಧರ್ಮ ಸಂಸ್ಥಾಪನಾ ದಿನವನ್ನು ಆಯ್ದುಕೊಳ್ಳಲಾಗಿದೆ. ಕೂಡಲ ಸಂಗಮದಲ್ಲಿ ಧರ್ಮಪಿತರು ಇದ್ದಾಗಲೇ ಇಷ್ಟಲಿಂಗದ ಪರಿಕಲ್ಪನೆ ಮೂಡಿತು. ದೇವಾನುಗ್ರಹವಾಯಿತು. ನವಧರ್ಮ ಸ್ಥಾಪನೆಯಾಯಿತ್ತು.

2. ಬಸವ ಜಯಂತಿಯಂದು ಕಾರ್ಯಕ್ರಮ ಇಟ್ಟುಕೊಳ್ಳೋಣವೆಂದರೆ ಎರಡು ಸಮಸ್ಯೆ ಉಂಟಾಗುತ್ತವೆ.

1. ಬಸವ ತತ್ತ್ವನಿಷ್ಠರೇ ಎಲ್ಲಾ ಕಡೆ ಬಸವ ಜಯಂತಿಯನ್ನು ಅದ್ದೂರಿಯಾಗಿ, ಅರ್ಥ ಪೂರಿತವಾಗಿ ಆಚರಿಸುವುದರಿಂದ ಅವರನ್ನು ಕಾರ್ಯಕ್ರಮಕ್ಕೆ ಬರಮಾಡಿಕೊಂಡರೆ ಸ್ಥಳೀಯವಾಗಿ ನಡೆಯುವ ಬಸವಜಯಂತಿ ಉತ್ಸವಗಳು ಕಳಾಹೀನವಾಗುತ್ತವೆ.

2. ಬಸವ ಕಲ್ಯಾಣದ ಬಸವೇಶ್ವರ ದೇವಾಲಯದ ಸಮಿತಿಯವರು ಬಸವ ಜಯಂತಿಗೆ ಉತ್ಸವ ಆಚರಿಸುವುದರಿಂದ ಅವರಿಗೂ ಅನಾನುಕೂಲವಾಗುವುದು.

3. ಬಸವ ಪಂಚಮಿ-ಬಸವ ಲಿಂಗೈಕ್ಯ ದಿನ. ಅದು ಶ್ರಾವಣ ಮಾಸದಲ್ಲಿ ಬರುತ್ತದೆ. ಮಳೆಗಾಲವಿರುತ್ತದೆ. ಹೀಗಾಗಿ ಬಯಲಲ್ಲಿ ಕಾರ್ಯಕ್ರಮ ಮಾಡುವುದು ಕಷ್ಟವಾಗುತ್ತದೆ.

ಬಸವ-ಕಲ್ಯಾಣ -ಧರ್ಮಪಿತರ ಹುಟ್ಟು ಮತ್ತು ಲಿಂಗೈಕ್ಯಕ್ಕಿಂತಲೂ ಕಾರ್ಯವಿಸ್ತಾರಕ್ಕೆ ಸಂಬಂಧಿಸಿದುದು. ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಸೂತ್ರ (ಮಂತ್ರ) ಘೋಷಿಸಲ್ಪಟ್ಟುದು ಆ ಶರಣ ಭೂಮಿಯಿಂದ. ಅಸಂಖ್ಯಾತ ಶರಣರು ಕಾಯಕ ಕಲಿಗಳಾಗಿಯೇ ಅನುಭಾವಿಕ ಯೋಗಿಕ ನಿಲುವನ್ನು ಪಡೆದರು. ದುಡಿಮೆಗೆ ಮಾನ್ಯತೆ ಕೊಟ್ಟ ಪ್ರಥಮ ಸಮಾಜವಾದಿ (Socialist) ಧರ್ಮಪಿತ ಬಸವಣ್ಣನವರು. ಆದ್ದರಿಂದ ಕಾಯಕಕ್ಕೆ ಮಾನ್ಯತೆ ನೀಡುವ ಮೇ 1ನ್ನು ಗಮನದಲ್ಲಿ ಇಟ್ಟುಕೊಂಡು ದಿನಾಂಕಗಳನ್ನು ನಿಶ್ಚಯಿಸಲಾಗಿದೆ. ಕೂಡಲ ಸಂಗಮದ ಶರಣ ಮೇಳ ಜನವರಿ 11ರಿಂದ 15ರವರೆಗೆ ಕಲ್ಯಾಣದ ಗಣಪರ್ವ ಏಪ್ರಿಲ್ 30, ಮೇ 1-2 ರಂದು ನಡೆಯುವುದು.

ಶರಣ ಭೂಮಿ ಬಸವ ಕಲ್ಯಾಣ

15ನೆಯ ಶರಣ ಮೇಳದಲ್ಲಿ ತೆಗೆದುಕೊಂಡ ಮಹತ್ವದ ನಿರ್ಣಯಗಳಲ್ಲಿ ಧರ್ಮಕ್ಷೇತ್ರದ ಸಾಲಿನಲ್ಲಿ ಬಸವ ಕಲ್ಯಾಣವು ಸೇರ್ಪಡೆಯಾದುದು. ಬಸವ (ಲಿಂಗಾಯತ) ಧರ್ಮದ 4ನೆಯ ಸೂತ್ರ ಧರ್ಮಕ್ಷೇತ್ರ ಕುರಿತುದಾಗಿದೆ.

ಧರ್ಮಕ್ಷೇತ್ರ- ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ ಎಂದು 15 ವರ್ಷಕಾಲ ಹೇಳಿದ್ದೇವೆ. ಇನ್ನು ಮುಂದೆ ಘೋಷಣೆ ಹೀಗಿರುತ್ತದೆ.

ನಮ್ಮ ಧರ್ಮಕ್ಷೇತ್ರ(ಗಳು) - ಬಸವಣ್ಣನವರ ಐಕ್ಯ ಕ್ಷೇತ್ರ ಕೂಡಲಸಂಗಮ

ಶರಣ ಭೂಮಿ ಬಸವ ಕಲ್ಯಾಣ

''ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನ'' ಎಂದು ಅಕ್ಕ ಹೇಳುವಂತೆ ಬಸವ ಕಲ್ಯಾಣವು ಶರಣರು ನಡೆದಾಡಿದ ಪುಣ್ಯಭೂಮಿ. ಕೂಡಲಸಂಗಮ ಬಸವಣ್ಣನವರ ಐಕ್ಯಕ್ಷೇತ್ರವಾಗಿ ನಮಗೆ ಧರ್ಮಕ್ಷೇತ್ರವಾದಂತೆ ಬಸವ ಕಲ್ಯಾಣವು ಶರಣಭೂಮಿಯಾಗಿ ನಮಗೆ ಧರ್ಮಕ್ಷೇತ್ರ.

ಇಂತಹ ಶರಣಭೂಮಿಯಲ್ಲಿ ಏಪ್ರಿಲ್ 30, ಮೇ 1-2ರಂದು ನಡೆಯವ ಧಾರ್ಮಿಕ ಸಮಾಗಮವನ್ನು ''ಕಲ್ಯಾಣ ಪರ್ವ'' ಎಂದು ಕರೆಯಲಾಗುವುದು. ಪರ್ವ ಎಂದರೆ ಹಬ್ಬ, ಕಲ್ಯಾಣ ಪರ್ವ ಎಂದರೆ ಕಲ್ಯಾಣದಲ್ಲಿ ನಡೆಯುವ ಬಸವ ಧರ್ಮೀಯರ ಹಬ್ಬ. ಕಲ್ಯಾಣ ಪದವನ್ನು ಉತ್ಸವದ ಹೆಸರಿನಲ್ಲಿಯೇ ಸೇರ್ಪಡೆ ಮಾಡಲು ನಾನು ಬಯಸಿರುವ ಕಾರಣ ಹೀಗಿದೆ.

1. ಮಹಾತ್ಮಾ ಗಾಂಧೀಜಿ ಸತ್ಯವನ್ನು ಧ್ಯೇಯವಾಗಿಟ್ಟುಕೊಂಡು ಅಹಿಂಸೆಯನ್ನು ಸಾಧನವಾಗಿ ಇಟ್ಟುಕೊಂಡಂತೆ ಕ್ರಾಂತಿ ಪುರುಷ ಬಸವಣ್ಣನವರು ಕಲ್ಯಾಣ, (welfare) ಲೇಸನ್ನು ಗುರಿಯಾಗಿ ಇಟ್ಟುಕೊಂಡು ಧರ್ಮವನ್ನು ಸಾಧನವಾಗಿ ಇಟ್ಟುಕೊಂಡರು. ವ್ಯಕ್ತಿ ಕಲ್ಯಾಣ, ಸಮಾಜ ಕಲ್ಯಾಣ, ರಾಷ್ಟ್ರ ಕಲ್ಯಾಣ, ವಿಶ್ವಕಲ್ಯಾಣವೇ ಅವರ ಸಾಧನೆಯ ಧ್ಯೇಯವಾಗಿತ್ತು. ಅಕ್ಕಮಹಾದೇವಿ ಹೇಳುವಂತೆ 'ಒಳಗೂ ಕಲ್ಯಾಣ ಹೊರಗೂ ಕಲ್ಯಾಣ'. ಸಕಲ ಜೀವಾತ್ಮರಿಗೆ ಲೇಸು (ಕಲ್ಯಾಣ) ಬಯಸುವವನೇ ಶರಣ ಎಂದು ಹೇಳಿ ಶರಣನನ್ನು ವಿಶ್ವಪ್ರಜೆ (Universal Citizen) ವಿಶ್ವ ಕುಟುಂಬಿಯನ್ನಾಗಿ ಮಾಡಿದರು. ಆದ್ದರಿಂದ ಕಲ್ಯಾಣದಲ್ಲಿ ನಡೆಯುವ ಮನುಕುಲದ ಲೇಸನ್ನು ಬಯಸುವ ಪರ್ವ (ಹಬ್ಬ) ಕಲ್ಯಾಣ ಪರ್ವ ಎಂದರೆ ಸೂಕ್ತವೆನಿಸೀತು.

2. ಕಾಲಜ್ಞಾನ ವಚನಗಳ ಪ್ರಕಾರ ಕಲ್ಯಾಣ ನಗರಕ್ಕೆ ಮೊದಲು ಹಲವಾರು ಹೆಸರಿದ್ದುವಂತೆ. ಕಲ್ಯಾಣ ರಾಜ್ಯ ನಿರ್ಮಾಣವನ್ನು ಧ್ಯೇಯವಾಗಿಟ್ಟುಕೊಂಡ ಬಸವಣ್ಣನವರು ''ಶಿವಪುರ'' ಎಂಬುದನ್ನು ಕಲ್ಯಾಣ ನಗರ ಎಂದು ಕರೆದಿರಲಿಕ್ಕೂ ಸಾಕು. ಅಂಥ ಕಲ್ಯಾಣವೇ ಪ್ರಣತೆಯಾಯಿತು. ಭಕ್ತಿರಸವೇ ತೈಲವಾಯಿತು. ಸದಾಚಾರವೇ ಭಕ್ತಿಯಾಯಿತು. ಬಸವಣ್ಣನೆಂಬ ಜ್ಯೋತಿ ಸ್ಪರ್ಶಿಸಲು ಅಲ್ಲಿ ದೈವೀಪ್ರಕಾಶವು ತೊಳಗಿ ಬೆಳಗಲಾರಂಭಿಸಿತು. ಅಂಥ ದೈವೀ ಪ್ರಕಾಶದಲ್ಲಿ ತಮ್ಮ ಬಾಳ ಹಣತೆಗಳನ್ನು ಹೊತ್ತಿಸಿಕೊಳ್ಳಲು ಸಾಧಕರು, ಸಿದ್ಧ ಪುರುಷರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದೆಲ್ಲ ಆಗಮಿಸಿದರು. ಇದೆಲ್ಲವೂ ಆದುದು ಕಲ್ಯಾಣದಲ್ಲಿ. ಅದಕ್ಕಾಗಿ ಈಗ ನಡೆಯುವ ಹಬ್ಬವನ್ನು ಕಲ್ಯಾಣ ಪರ್ವ ಎಂದು ಕರೆಯಲಾಗುವುದು. ವಿಶ್ವದ ಲೇಸನ್ನೂ ಬಯಸಲು ಕಲ್ಯಾಣದಲ್ಲಿ ನಡೆಯುವ ಹಬ್ಬ ಕಲ್ಯಾಣ ಪರ್ವ ಎಂದು ತಿಳಿಯೋಣ.

ಶರಣ ಮೇಳವಲ್ಲದೆ ಪ್ರತಿವರ್ಷ ಬೇರೆಬೇರೆ ಸ್ಥಳಗಳಲ್ಲಿ ಬಸವ ಧರ್ಮ ಸಮ್ಮೇಳನ ಮಾಡುತ್ತಾ ನಾವು ಮುಂಬೈ, ದೆಹಲಿವರೆಗೂ ಹೋಗಿ ಬಂದೆವು. ಆ ರೀತಿ ಬಸವ

ಕಲ್ಯಾಣದಲ್ಲಿಯೂ ಒಂದು ವರ್ಷ ಸಮ್ಮೇಳನ ಮಾಡಿ ಬಿಡಬಹುದಿತ್ತು. ಆದರೆ ಇದರಿಂದ ಕ್ಷೇತ್ರದ ಪುನರ್ ನಿರ್ಮಾಣ ಸಾಧ್ಯವಾಗದು. ಧರ್ಮಕ್ಷೇತ್ರ ಸಂಗಮಕ್ಕೆ ಪ್ರತಿವರ್ಷವೂ ಬರಬೇಕು ಎಂಬ ಪರಿಪಾಠ ಶರಣ ಮೇಳದ ಮೂಲಕ ಶರಣ ಬಂಧುಗಳಲ್ಲಿ ಬೆಳೆದಂತೆ ಬಸವ ಕಲ್ಯಾಣ ಬಗೆಗೂ ಭಾವನಾತ್ಮಕ ಸಂಬಂಧ ಬೆಳೆದು ನವ ಕಲ್ಯಾಣದ ಕನಸು ನನಸಾಗಬೇಕಾದರೆ ಪ್ರತಿವರ್ಷವೂ ಈ ಕಲ್ಯಾಣಪರ್ವ ನಡೆಯಬೇಕು ಎಂಬುದು ನಮ್ಮ ಆಶಯ. ಆಶಯವೇನೋ ಚೆನ್ನಾದುದು. ಆದರೆ, ಅದರ ಜೊತೆಗೆ ಆತಂಕವೂ ಕಾಡುತ್ತದೆ.

ಈ ಸಲದ ಶರಣ ಮೇಳಕ್ಕೆ ಅತಿಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದರೂ ಕಾರ್ಯಕ್ರಮ ಅತ್ಯಂತ ನಿರಾಯಾಸವಾಗಿ ನಡೆಯಿತು. ಕಾರಣ ಎಂದರೆ ಪ್ರತಿಯೊಬ್ಬರೂ ಚೆನ್ನಾಗಿ ತರಬೇತಿ ಹೊಂದಿ ಅವರವರ ಕೆಲಸವನ್ನು ಅವರವರು ಮಾಡಿದುದು. ಸಮಯಕ್ಕೆ ತಕ್ಕಂತೆ ಹಾಜರಾಗಿ ತಾವು ತಾವೇ ಕೆಲಸಗಳನ್ನು ವಹಿಸಿಕೊಂಡು ಮಾಡಿದುದು ನನಗಂತೂ ಅಪಾರ ಸಂತೋಷವನ್ನುಂಟು ಮಾಡಿತು. ಕಾರ್ಯಕರ್ತರು, ಮೇಲ್ವಿಚಾರಕರು, ರಾಷ್ಟ್ರೀಯ ಬಸವ ದಳದವರು, ಇನ್ನಿತರ ಶರಣರು ಎಲ್ಲರೂ ತನುಮನಧನಗಳನ್ನು ಮುಡಿಪಿಟ್ಟು ದುಡಿದಿದ್ದಾರೆ. ದೇಣಿಗೆ ಸಂಗ್ರಹಿಸಿದ್ದಾರೆ. 'ಶರಣ ಮೇಳ' ವರ್ಷಕ್ಕೊಮ್ಮೆ ಬರುವ ಹಬ್ಬ ಎಂದು ಮುಡಿಪು ಸಂಗ್ರಹ ಮಾಡಿ ತರುವವರು ಉಂಟು. ಹೀಗಿರುವಾಗ ಜನವರಿ ತಿಂಗಳಲ್ಲಿ ಶರಣ ಮೇಳದಂತಹ ಬೃಹತ್ ಕಾರ್ಯಕ್ರಮ ನಡೆಸಿ , ಪುನಃ ಮೂರುವರೆ ತಿಂಗಳ ಅವಧಿಯಲ್ಲಿ ಇನ್ನೊಂದು ಬೃಹತ್ ಕಾರ್ಯಕ್ರಮ- ಕಲ್ಯಾಣ ಪರ್ವವನ್ನು ಬಸವ ಕಲ್ಯಾಣದಲ್ಲಿ ಹಮ್ಮಿಕೊಂಡರೆ ಶರಣ ಬಂಧುಗಳಿಗೆ ತೊಂದರೆಯಾಗದೆ ಎಂಬ ಚಿಂತೆ ನನ್ನನ್ನೂ ಕಾಡುತ್ತದೆ. ಬೇರೆ ಬೇರೆ ಊರುಗಳಲ್ಲಿ ರಾಷ್ಟ್ರೀಯ ಬಸವದಳದವರು, ಇನ್ನಿತರ ಶರಣ ಬಂಧುಗಳು ಶರಣ ಮೇಳಕ್ಕಾಗಿ ಕಾಣಿಕೆ ಸಂಗ್ರಹಿಸಿರುತ್ತಾರೆ. ಇವರು ಪುನಃಜನರಲ್ಲಿ ದೇಣಿಗೆ ಕೇಳಲು ಕಷ್ಟವಾಗಬಹುದೆ ? ಮುಜುಗರ ಎನ್ನಿಸಬಹುದೆ ?

ನಮ್ಮ ಕಾರ್ಯಕ್ರಮಗಳಿಗೆ, ಬರುವ ಹಣ ಒರತೆಯ ನೀರಿನಂತೆ ಅಲ್ಪ ಪ್ರಮಾಣದ್ದು, ಎಲ್ಲ ಶರಣ ಬಂಧುಗಳು ಸಾಮೂಹಿಕವಾಗಿ ದುಡಿಯುತ್ತಾರೆ ಮತ್ತು ಪ್ರಾಮಾಣಿಕವಾಗಿ ತಂದು ಮುಟ್ಟಿಸುತ್ತಾರೆ ಎಂದು ಎಲ್ಲ ಸೇರಿಸಿ ಶರಣ ಮೇಳ ನಿರ್ವಹಿಸಲು ಸಾಧ್ಯವಾಗುತ್ತದೆ. ಹೀಗಿರುವಾಗ ರಸೀತಿ ಪುಸ್ತಕಗಳನ್ನೂ ಹೇಗೆ ತಾನೆ ನಿಸ್ಸಂಕೋಚವಾಗಿ ಕಳಿಸುವುದು ? ಸಮಯಾವಕಾಶ ಹೆಚ್ಚು ಕೊಡೋಣ ಎಂದರೆ ಮುಂದೆ ಮಳೆಗಾಲ ಬರುತ್ತದೆ. ಅಕ್ಟೋಬರ್‌ನಲ್ಲಿ ತರಬೇತಿ ಶಿಬಿರಗಳನ್ನು, ಪ್ರಸಂಗ ಬಂದರೆ ಹೊರರಾಜ್ಯಗಳಲ್ಲಿ ಬಸವ ಧರ್ಮ ಸಮ್ಮೇಳನ ಹಮ್ಮಿಕೊಳ್ಳಬೇಕಾದೀತು. ಕಲ್ಯಾಣ ಪರ್ವದ ದಿನಾಂಕಗಳು ಬದಲಾಗದಂತೆ ಜನರಲ್ಲಿ ಅಚ್ಚೊತ್ತಬೇಕು. ಹೀಗಾಗಿ ಮೇ 1 ಬಿಟ್ಟರೆ ಬೇರಾವ ದಿನಾಂಕವೂ ನನಗೆ ಸಮಂಜಸವೆನಿಸುತ್ತಿಲ್ಲ. ಬಸವ ಕಲ್ಯಾಣವನ್ನು ಭಕ್ತಿ-ಜ್ಞಾನಗಳ ಕೇಂದ್ರವನ್ನಾಗಿ ಬೆಳಸಿ ಅಲ್ಲಿ ಶರಣ ಪರಂಪರೆ-ಸಂಸ್ಕೃತಿಗಳ ಪುನರುತ್ಥಾನ ಮಾಡುವುದು ತೀರಾ ಅನಿವಾರ್ಯವಾಗಿದೆ.

ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ನಡೆಸುವಾಗ ಜನರು ಅಸಂಖ್ಯಾತರಾಗಿ

ಆಗಮಿಸುತ್ತಾರೆ. ಎಷ್ಟು ಸಾಮಗ್ರಿಗಳನ್ನು ತಂದರೂ ಕ್ಷಣ ಮಾತ್ರದಲ್ಲಿ ಮುಗಿಯುತ್ತದೆ.

ಎಣಿಕೆಗೆ ಬಂದ ಸಯದಾನ ಕ್ಷಣಕ್ಕೆ ಪಾಕವಾಗಲು
ಗಣನೆಯಿಲ್ಲದೆ ನೀಡುತ್ತಿರಲು, ತೋರದ ಮುನ್ನವೆ ಅರ್ಪಿತವಾದವು.
ಇಂತು ಎಣಿಸಿ ನೋಡಿಹೆನೆಂದಡೆ ಮನಕೆ ಸಾಧ್ಯವಲ್ಲ
ಬಯಲು ಬಾಯಿದೆಗೆದಂತ ಉಣ್ಣುತ್ತಿದ್ದಾನು
ಲಿಂಗದೇವನು -ಬ.ವದೀ. 13224

ಆಗ ಧರ್ಮಪಿತರಿಗೆ ಒಂದು ಕಡೆ ಸಂತೋಷ. ಇನ್ನೊಂದು ಕಡೆ ಭಯ. ದೇವನೇ ಈ ಶರಣರ ಮೂಲಕ ಉಂಡು ಸಂತೋಷಿಸುತ್ತಿದ್ದಾನೆ ಎಂಬ ಸಂತೋಷ ಒಂದು ಕಡೆ. ಇಂಥ ಬೃಹತ್ ಸಮೂಹಕ್ಕೆ ಒದಗಿಸುವುದು ಹೇಗೆ ಎಂಬ ಆತಂಕ ಇನ್ನೊಂದು ಕಡೆ. ಆದರೆ ಅವರು ಧೈರ್ಯಗೆಡದೆ ಹೀಗೆ ಹೇಳುತ್ತಾರೆ :

ಸಯದಾನ ಸವೆಯುತ್ತೆಂದು ಬೆದರಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ !
ಪಡಿಪದಾರ್ಥಗಳು ಅವಸರಕ್ಕೆ ಒದಗದೆ ಇದ್ದಲ್ಲಿ
ಮನವಳುಕಿ ಬೆದರಿದೆನಾದಡೆ ನಿಮ್ಮ ಭಕ್ತರಿಗೆ ಸಲ್ಲೆನು
ಒಡವೆ ಸವೆದಡೆ ಒಡಲನೆ ಸಲಿಸುವೆನು
ಕಡೆಮುಟ್ಟ(ಟ್ಟಿ) ಪೂರೈಸದಿದ್ದೆನಾದಡೆ
ಮಡಿವಾಳ ಮಾಚಿ ತಂದೆಯ ಪಾದಸಾಕ್ಷಿಯಾಗಿ
ಲಿಂಗದೇವರಿಗೆ ದೂರವಹೆನು - ಬ.ವ.ದೀ 1126

ಶರಣರಿಗೆ ದಾಸೋಹ ಮಾಡಿಸಬೇಕಾದರೆ ಅಂಜಬಾರದು. ಅಳುಕಬಾರದು ಎಂದು ನಿರ್ಧರಿಸುತ್ತಾರೆ. ಇಂಥ ಧೀರ ಗುರುವಿನ ಸಂತತಿ ನಾವು.

ಆದ್ದರಿಂದ ಶರಣ ಬಂಧುಗಳು ಅನ್ಯಥಾ ಭಾವಿಸದೆ ಒಮ್ಮನದಿಂದ, ನಿಷ್ಠೆಯಿಂದ, ಕಲ್ಯಾಣ ಪರ್ವದ ಯಶಸ್ಸಿಗಾಗಿ ದುಡಿಯಬೇಕಾಗಿದೆ. ಸ್ವಯಂ ಪ್ರೇರಣೆಯಿಂದ ಪತ್ರ ಬರೆದು ರಸೀತಿ ಪುಸ್ತಕ, ಕರಪತ್ರ, ಭಿತ್ತಿಪತ್ರ ತರಿಸಿಕೊಳ್ಳಿರಿ. ಮೊದಲನೆಯ ಶರಣಮೇಳವನ್ನು ನೆನಪಿಗೆ ತಂದುಕೊಳ್ಳಿರಿ. ಯಾವುದೇ ಕಟ್ಟಡವಿರದೆ ಖಾಲಿ ಮೈದಾನದಲ್ಲಿ, ಸರ್ಕಾರಿ ಅತಿಥಿಗೃಹದ ಕೋಣೆಯಲ್ಲಿ ನಾವೂ ಇದ್ದುಕೊಂಡು ಮೊದಲ ಶರಣ ಮೇಳವನ್ನು 1988ರಲ್ಲಿ ಮಾಡಿದೆವು. ಈಗ ತಾನೆ ಜಾಗ ತೆಗೆದುಕೊಳ್ಳಲಾಗಿದೆ. ಎಲ್ಲವೂ ಬಯಲಲ್ಲಿ ನಿರ್ಮಾಣವಾಗಬೇಕಿದೆ. ಆದ್ದರಿಂದ ತನು ಸೇವೆಗಾಗಿ ಕರಸೇವಕರು ಆದಷ್ಟು ಬೇಗನೇ ಬರಬೇಕು. ಈಗಾಗಲೇ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯ ಶರಣರು ಕರಸೇವೆ ಮಾಡಲು ಬರಲು ಉತ್ಸುಕರಾಗಿ ದಿನಾಂಕವನ್ನು ಕೇಳುತ್ತಿದ್ದಾರೆ. ಅದೇ ರೀತಿ ಇನ್ನಿತರ ಭಾಗದವರು ಮತ್ತು ಮುಖ್ಯವಾಗಿ ಕಲ್ಯಾಣ ನಾಡಿನವರು ಹೆಚ್ಚಿನ ಉತ್ಸಾಹದಿಂದ ತನು-ಮನ-ಧನಗಳಿಂದ ದುಡಿಯಲು ಮುಂದಾಗಬೇಕೆಂದು ಸೂಚಿಸುತ್ತೇವೆ.

ಮೂರು ಸ್ಫುರಣಗಳು

- ಮಾತಾಜಿ

ಶರಣ ಮೇಳದ ಸಿದ್ಧತೆಗಾಗಿ ಬೆಂಗಳೂರಿನಿಂದ ಕೂಡಲ ಸಂಗಮಕ್ಕೆ ಹೊರಟಿದ್ದೆ, ಪ್ರಯಾಣ ಮಾಡುತ್ತಾ ಗಾಡಿ ತುಮಕೂರಿಗೆ ಬಂದಿತ್ತು. ಬಲಕ್ಕೆ ಹೊರಳಿದೆವು. ಸೀದಾ ಹೋದರೆ ಬಿ.ಹೆಚ್.ರಸ್ತೆ, ಬೆಂಗಳೂರು ಹೊನ್ನಾವರ ರಸ್ತೆ; ಇದೇ ಪಂಚಪೀಠದವರ ಶ್ರದ್ಧಾ ಕೇಂದ್ರ, ಬಾಳೇಹೊನ್ನೂರಿಗೂ ಕರೆದೊಯ್ಯುವ ರಸ್ತೆ. ಮುಂದೆ ಚಿತ್ರದುರ್ಗ, ಸೀದಾ ಹೋದರೆ ಬೆಂಗಳೂರು-ಪೂನಾ-ಮುಂಬಯಿಗೆ. ನಮ್ಮ ಧ್ಯೇಯ ಕೂಡಲ ಸಂಗಮ. ಸರಿ, ಪುನಃ ಬಲಕ್ಕೆ ಹೊರಳಿ ಪ್ರಯಾಣವನ್ನು ಮುಂದುವರೆಸಿದೆವು. ಅಲ್ಲಿಂದ ರಾಷ್ಟ್ರೀಯ ಹೆದ್ದಾರಿ 4ರ ಸಂಪರ್ಕ ಕಡಿದುಕೊಂಡು ರಾಷ್ಟ್ರೀಯ ಹೆದ್ದಾರಿ 13 ಪ್ರವೇಶಿಸುತ್ತೇವೆ. ಇದು ಅತೀವ ದೊಡ್ಡ ಹೆದ್ದಾರಿ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇದರ ವ್ಯಾಪ್ತಿ. ಭಾರತದ ಬೆನ್ನುಹುರಿಯಂತೆ.

1. ಲಿಂಗಾಯತ ಸಮಾಜ ಎಂಬುದರಲ್ಲಿಯೂ ಈ ಮೂರು ದಾರಿಗಳಿವೆ. ಬೆಂಗಳೂರು-ಬಾಳೆಹೊನ್ನೂರು ರಸ್ತೆಯಂತೆ, ಪಂಚಪೀಠದ ಗುರುಗಳು, ಅವರ ಅನುಯಾಯಿಗಳ ವಿಚಾರ ಧಾರೆ. ಬೆಂಗಳೂರಿಂದ ತುಮಕೂರುವರೆಗೆ ಕೇವಲ 70 ಕಿಲೋಮೀಟರ್ ಈ ದಾರಿಯಲ್ಲಿ ಪಯಣ. ಪಂಚಪೀಠದ ವೀರಶೈವರಿಗೂ, ಶರಣ ಪರಂಪರೆಯ ಲಿಂಗಾಯತರಿಗೂ ಇರುವ ಸಾಮಾನ್ಯ ಅಂಶ (Common Point) ಇಷ್ಟಲಿಂಗಧಾರಣೆ. ಉಳಿದಂತೆ ಅವರಲ್ಲಿ ಬಸವಾದಿ ಪ್ರಮಥರ ಆದರ್ಶ, ಕ್ರಾಂತಿಕಾರಿ ವಿಚಾರ ಧಾರೆ, ಪ್ರಗತಿಪರ ಚಿಂತನೆ, ಏನೇನೂ ಇಲ್ಲ. ಅವರು ಇನ್ನೂ ಚಿನ್ನದ ಕಿರೀಟ, ಅಡ್ಡಪಲ್ಲಕ್ಕಿ ವೈಭವ, ವಜ್ರದುಂಗುರ, ಬಣ್ಣಬಣ್ಣದ ಪಟ್ಟೆಪೀತಾಂಬರಗಳಲ್ಲೇ ಅನುರಕ್ತರು. ಹೀಗಾಗಿ ನಮ್ಮ ದಾರಿ ಬಹಳ ಬೇಗನೇ ಬೇರ್ಪಡುತ್ತದೆ.

2. ಬೆಂಗಳೂರು-ಪೂನಾ ರಸ್ತೆಯುದ್ದಕ್ಕೂ ವಿರಕ್ತ ಮಠಗಳ ಸಾಲೇ ಇದೆ. ನೆಲಮಂಗಲ, ತುಮಕೂರು, ಚಿತ್ರದುರ್ಗ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ, ಸಂಕೇಶ್ವರ, ಕೊಲ್ಹಾಪುರ ಹೀಗಿದೆ ಸಾಲು. ಅವರಿಗೂ ನಮಗೂ ಕೊಂಚ ಹೆಚ್ಚು ಸಮಾನ ಅಂಶವಿದೆ. 1. ಇಷ್ಟಲಿಂಗಧಾರಣೆ 2. ಶ್ರೀಗುರು ಬಸವಲಿಂಗಾಯ ನಮಃ ಮಂತ್ರ. ಆದರೆ ಒಬ್ಬಿಬ್ಬರನ್ನು ಬಿಟ್ಟರೆ ಬಸವಣ್ಣನವರನ್ನು ಧರ್ಮದ ಆದ್ಯರೆಂದು, ವಚನ ಸಾಹಿತ್ಯವನ್ನು ಲಿಂಗಾಯತ ಧರ್ಮ ಸಂಹಿತೆ ಎಂದು, ವೀರ ಶೈವ-ಲಿಂಗಾಯತ ಬೇರೆ ಎಂದು ದೃಢವಾಗಿ ಹೇಳುವ ಧೈರ್ಯ-ಆತ್ಮಬಲ ಬಹುಪಾಲು ವಿರಕ್ತರಿಗಿಲ್ಲ. ಒಂದು ಮಾತನ್ನು ಹೇಳಬೇಕಾದರೆ ಅವರು ತಮ್ಮನ್ನು ಸುತ್ತುವರಿದಿರುವ ಪ್ರಭಾವ ಶಾಲಿ ಭಕ್ತ (ಭುಕ್ತ) ಪರವಾನಗಿಗಾಗಿ ಕಾಯಬೇಕಾಗುತ್ತದೆ. ಏನು ಹೇಳಿದರೆ 'ಏನೋ' ಎಂಬ ಭಯದಲ್ಲಿ ಇರುತ್ತಾ ತಿಪ್ಪೇಸಾರಿಸುವ ಅನಿವಾರ್ಯತೆ ಅವರಿಗಿದೆ. ಸಮಾನತೆ, ಏಕದೇವೋಪಾಸನೆ ಅವರ ನಿದ್ದೆಗೆಡಿಸುತ್ತವೆ. ಗಣಪತಿ, ಶನಿ ಮುಂತಾದ ನವಗ್ರಹಗಳು, ಹೋಮ-ಹವನಾದಿಗಳಲ್ಲಿ ಹವಿಸ್ಸು ಪಡೆಯುವ ಅಗ್ನಿ ಬಹುಪಾಲು ಸ್ವಾಮಿಗಳನ್ನು ಬೆಚ್ಚಿಬೀಳಿಸುತ್ತವೆ.

3. ಹೀಗಾಗಿ ತುಮಕೂರಿನಿಂದ ಚಿತ್ರದುರ್ಗದವರೆಗೆ ಸಾಗಿ ಬಂದರೂ ಆ ದಾರಿಯಿಂದ ಬಲಕ್ಕೆ ಹೊರಳಿ ರಾಷ್ಟ್ರೀಯ ಹೆದ್ದಾರಿ 13 ಹಿಡಿಯಬೇಕಾಗಿದೆ. ಇದೇ ಶರಣ ಪರಂಪರೆ. ಗುರು ವರ್ಗ-ವಿರಕ್ತವರ್ಗಗಳಿಂದ ಬೇರೆಯೇ ಆದ ಪ್ರಗತಿಪರ ಧೋರಣೆ ಇವರದು. 13ನೆಯ ಹೆದ್ದಾರಿ ಇಡೀ ಭಾರತವನ್ನು ಬೆಸೆಯುವಂತೆ ಶರಣ ಪರಂಪರೆ ಜಾತಿವರ್ಣಾತೀತವಾಗಿ ಎಲ್ಲರನ್ನೂ ಬೆಸೆಯಬಲ್ಲುದಲ್ಲವೆ ?

ಹೊಳೆಯ ನೀರು - ಬೋರ್ ನೀರು

ಈ ಸಲಕಾರ್ಯಕರ್ತರು ಬಹಳ ಜವಾಬ್ದಾರಿ ಹೊತ್ತು ಶರಣ ಮೇಳದ ಜನರಿಗೆ ಶುದ್ಧವಾದ ಬೋರ್ ನೀರನ್ನೇ ಕುಡಿಯಲು ಒದಗಿಸಿದರು. ಹೊಳೆಯ ನೀರನ್ನು ಕೇವಲ ಸ್ನಾನ ಮುಂತಾದ್ದಕ್ಕೆ ವ್ಯವಸ್ಥೆ ಮಾಡಿದರು. ಹೀಗಾಗಿ ಆರೋಗ್ಯ ಇಲಾಖೆಯವರು ಕುಡಿಯುವ ನೀರಿಗೆ ಡಿ.ಡಿ.ಟಿ. ಹಾಕಿ ವಾಸನೆ ಉಂಟು ಮಾಡಲು ಅವಕಾಶ ಸಿಗಲಿಲ್ಲ.

ಹತ್ತು ದಿವಸಗಳ ನಂತರ ಹೊಳೆಯ ನೀರು, ಕೊಳವೆ ಭಾವಿಯ ನೀರಿನ ಜೊತೆಗೆ ಮಿಶ್ರಣಗೊಂಡು ಟ್ಯಾಂಕಿನಲ್ಲಿ ಸಂಗ್ರಹವಾಗಿದೆ. ಅದನ್ನು ಆಶ್ರಮವಾಸಿಗಳು ಕೆಲವರು ಕುಡಿದಾಗ ವಾಂತಿ, ಭೇದಿ ಆಯಿತು. ನೋಡಿ ನನಗೆ ಆಶ್ಚರ್ಯವಾಯಿತು. ಕಾರಣ ವಿಚಾರಿಸಿದಾಗ ಹೊಳೆಯ ನೀರನ್ನು ಟ್ಯಾಂಕಿಗೆ ಸೇರಿಸಿದ್ದು ತಿಳಿಯಿತು.

ಈ ಎರಡೂ ಪ್ರತ್ಯೇಕವಾಗಿಡಿರಿ. ಮಿಶ್ರಣ ಮಾಡಬೇಡಿರಿ'' ಎಂದು ಹೇಳುವಾಗ ಒಂದು ಸ್ಫುರಣ ಹೊಳೆಯಿತು ''ಬಸವಣ್ಣನವರ ತತ್ತ್ವ ತುಂಬಾ ಚೆನ್ನಾಗಿದೆ. ವಚನ ಸಾಹಿತ್ಯ ಅದ್ಭುತವಾಗಿದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಲಿಂಗಾಯತ ಸಮಾಜದ ಆಚರಣೆಗಳಿವೆಯಲ್ಲಾ?'' ಎಂದು ಅನೇಕ ವಿಚಾರಶೀಲರು ಪ್ರಶ್ನಿಸುತ್ತಾರೆ. ಲಿಂಗಾಯತ ಸಮಾಜದಲ್ಲಿ ವಚನ ಸಾಹಿತ್ಯದ ಕೊಳವೆ ಭಾವಿ ನೀರಿನ ಜೊತೆಗೆ ವೈದಿಕ-ವೀರಶೈವದ ಹೊಳೆಯ ನೀರೂ ಸೇರಿ ಕಲುಷಿತವಾಗಿ ಲಿಂಗಾಯತರಿಗೆ ತಮ್ಮ ಧರ್ಮವೇ ತಿಳಿಯುತ್ತಿಲ್ಲ. ಹೀಗಾಗಿ ತಪ್ಪುತಪ್ಪು ಆಚರಣೆಗಳಲ್ಲಿ ನಿರತರಾಗಿದ್ದಾರೆ ಎನ್ನಿಸಿತು.

ಲಿಂಗದೇವ-ಕೂಡಲ ಸಂಗಮದೇವ

ಕೆಲವರು ಹೇಳುತ್ತಾರೆ ''ಅನೇಕ ಸ್ವಾಮಿಗಳು, ಅವರ ಭಕ್ತರು ಹೇಳುತ್ತಾರೆ. ಮಾತಾಜಿ ಲಿಂಗದೇವ ವಾಪಸ್ಸು ಪಡೆಯಲಿ. ಎಲ್ಲರೂ ಸಹಕರಿಸುತ್ತಾರೆ'' ಎಂದು. ಇಂಥವರಿಗೆ ನಾನೊಂದು ಉದಾಹರಣೆ ಹೇಳಿದೆ. ಹೈಜಂಪ್ ಮಾಡುವಾಗ ಒಂದು ಅಡ್ಡಕೋಲು ಇರುತ್ತದೆ. ಅದನ್ನು ಹಾರಬಲ್ಲವರು ಗೆದ್ದಂತೆ ತೀರ್ಪು ಪಡೆಯುತ್ತಾರೆ. ಒಂದು ವೇಳೆ ಯಾರಿಗಾದರೂ ಹಾರಲು ಆಗದಿದ್ದರೆ ಅವರನ್ನು ಹೈಜಂಪ್‌ದಲ್ಲಿ ಸೋತವರೆಂದು ಪರಿಗಣಿಸುತ್ತಾರೆಯೇ ವಿನಾ, ಪಾಪ, ಅವರು ಹಾರಲಾರರು ಎಂದು ಕೋಲನ್ನು ಕೆಳಗೆ ಇಳಿಸುವುದಿಲ್ಲ. ಹಾಗೆಯೇ ಲಿಂಗದೇವ ಎಂಬುದು ಅಮೂಲ್ಯವಾದ ಒಂದು ತಾತ್ವಿಕ, ದಾರ್ಶನಿಕ ಪದ. ಅದರ ಅರ್ಥ ಕೆಲವರಿಗೆ ಆಗದೆ ಇದ್ದರೆ ಅವರ ಬೌದ್ಧಿಕ ಸಾಮರ್ಥ್ಯದ ಬಗ್ಗೆ ಅನುಕಂಪ ತಳೆಯಬೇಕೇ ವಿನಾ ಅವರನ್ನೂ ಸಮಾಧಾನ ಪಡಿಸಲು 'ಲಿಂಗದೇವ' ಪದವನ್ನು ಕೆಳಗಿಳಿಸಲು ಅರ್ಥಾತ್ ವಾಪಸ್ಸು ಪಡೆಯಲು ಆಗುವುದಿಲ್ಲ''.




॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

86666

ಬಸವ ಧರ್ಮದ ಮಹಾಜಗದ್ಗುರು ಪೀಠ

ಬಸವ ಕಲ್ಯಾಣ



ಗಣಧ್ವಜ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು ಧರೆಯವಗೆ
ವಶವಾಗದಿಹುದೇ ಸರ್ವಜ್ಞ?

ಬಸವ ಕಲ್ಯಾಣವು ಚಾರಿತ್ರಿಕ ಹಿನ್ನೆಲೆಯ ಮಹತ್ವಪೂರ್ಣ ಸ್ಥಳ. ವಿಶ್ವಗುರು ಬಸವಣ್ಣನವರ ಪವಿತ್ರ ಪಾದಸ್ಪರ್ಶದಿಂದ ಪುನೀತವಾದ ಈ ಧರ್ಮಭೂಮಿ ಅಸಂಖ್ಯಾತ ಶರಣರನ್ನು 12ನೆಯ ಶತಮಾನದಲ್ಲಿ ಆಕರ್ಷಿಸಿತು. ಕಲ್ಯಾಣವು ಪ್ರಣತೆಯಾಯಿತು. ಭಕ್ತಿರಸವು ತೈಲವಾಯಿತು. ಸದಾಚಾರವು ಬತ್ತಿಯಾಯಿತು. ಬಸವಣ್ಣನೆಂಬ ಜ್ಯೋತಿ ಮುಟ್ಟಲು ಅಲ್ಲಿ ದೈವೀಪ್ರಕಾಶವು ತೊಳಗಿ ಬೆಳಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತರು ಕಲ್ಯಾಣಕ್ಕೆ ಧಾವಿಸಿದರು. ಧರ್ಮಪಿತ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ವಚನ ಸಾಹಿತ್ಯವೆಂಬ ಅಮೂಲ್ಯ ವಾಙ್ಮಯವನ್ನು ಜಗತ್ತಿಗೆ ನೀಡಿತು. ''ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟುದು ಅವಿಮುಕ್ತಕ್ಷೇತ್ರ'' ಎಂದು ಜಗನ್ಮಾತಾ ಅಕ್ಕಮಹಾದೇವಿ ನುಡಿಯುವಂತೆ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಅವಿಮುಕ್ತ ಕ್ಷೇತ್ರವಾಗಿ ಕಂಗೊಳಿಸಿತು. ಧರ್ಮಪಿತ ಬಸವಣ್ಣನವರು ವಿದ್ಯಾಭ್ಯಾಸ ಮಾಡಿ ತಪಸ್ಸು ಗೈದು ಹೊಸಧರ್ಮವನ್ನು ನೀಡಿ ಮರ್ತ್ಯಲೋಕದ ಮಣಿಹ ಪೂರೈಸಿ ಉರಿಯುಂಡ ಕರ್ಪೂರದಂತೆ ಲಿಂಗದೇವನಲ್ಲಿ ಬಯಲಾದುದು ಕೂಡಲಸಂಗಮದಲ್ಲಿ. ಧರ್ಮಗುರು ಬಸವಣ್ಣನವರು ಐಕ್ಯರಾದ ಕೂಡಲ ಸಂಗಮವು ಲಿಂಗಾಯತ ಧರ್ಮಾನುಯಾಯಿಗಳಿಗೆ, ಬಸವ ಭಕ್ತರಿಗೆ ಧರ್ಮಕ್ಷೇತ್ರವಾದರೆ ಬಸವ ಕಲ್ಯಾಣವು ಧರ್ಮಭೂಮಿ, ಏಕೆಂದರೆ ಧರ್ಮಪಿತರ ಕಾರ್ಯಕ್ಷೇತ್ರವಾಗಿ 36 ವರ್ಷಗಳ ಕಾಲ ಅಸಂಖ್ಯಾತ ಶರಣರನ್ನು ಪಡೆದ ಪುಣ್ಯತಾಣ. ಪೂಜ್ಯಗುರು ಬಸವಣ್ಣನವರು ಇಷ್ಟಲಿಂಗಾರ್ಚನೆ ಮಾಡುತ್ತಿದ್ದ ಅರಿವಿನ ಮನೆ, ಚಿನ್ಮಯಜ್ಞಾನಿ ಚನ್ನಬಸವಣ್ಣನವರು ವಚನಗಳನ್ನು ರಚಿಸುತ್ತಿದ್ದ ಚಿನ್ಮಯ ಮಂಟಪ, ಅಲ್ಲಮಪ್ರಭುದೇವರು ನೆಲಸಿದ್ದ ಗದ್ದುಗೆ, ಅಕ್ಕನಾಗಲಾಂಬಿಕೆ, ನೀಲಗಂಗಾಂಬಿಕೆ ಮುಂತಾದವರ ಗವಿ, ಮಡಿವಾಳ ಮಾಚಿದೇವರ ಕೊಳ, ನುಲಿಯಚಂದಯ್ಯನವರ ಗವಿ, ರುದ್ರಮುನಿದೇವರ ಗದ್ದುಗೆ, ಹರಳಯ್ಯನವರ ಬಾವಿ(ಉಮಾಪುರ), ಮೋಳಿಗೆ ಮಾರಯ್ಯನವರ ಗವಿ (ಮೋಳಕೇರಿ) ಬಂದವರ ಓಣಿ, ಧರ್ಮಪಿತರು ಪ್ರಜೆಗಳಿಗೆ ಸಂದರ್ಶನ ನೀಡುತ್ತಿದ್ದ ಪರುಷಕಟ್ಟೆ, ಬಸವೇಶ್ವರ ಗುಡಿ ಇತ್ಯಾದಿ.

ಈ ಎಲ್ಲಾ ಚಾರಿತ್ರಿಕ ಕುರುಹುಗಳನ್ನು ಹೊಂದಿರುವ ಬಸವ ಕಲ್ಯಾಣ ಶರಣ ಭೂಮಿ (Holy land). ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ ಕೂಡಲಸಂಗಮ ಮತ್ತು ಬಸವ ಕಲ್ಯಾಣ.

ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಶ್ರೀಗುರು ಬಸವಣ್ಣನವರ ದಿವ್ಯ ಪ್ರೇರಣೆಯಂತೆ, 'ಬಸವ ಧರ್ಮ ಪೀಠ' ಎಂಬ ವಿಶ್ವಸ್ಥ ಟ್ರಸ್ಟ್ ಒಂದನ್ನು ಮುಂಬಯಿಯ 1950ನೇ ಟ್ರಸ್ಟ್ ಆ್ಯಕ್ಟ್ ಪ್ರಕಾರ ನೋಂದಾಯಿಸಲಾಗಿದೆ. ನೋಂದಣಿ ಸಂಖ್ಯೆ : ಎ 1758(BJP). ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಸಂಸ್ಥಾಪಕ ಗೌರವಾಧ್ಯಕ್ಷರಾಗಿ ಪ್ರಾರಂಭಗೊಂಡ , ಈ ಟ್ರಸ್ಟಿನ ಕಾರ್ಯಾಧ್ಯಕ್ಷರಾಗಿ ಈಗ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು, ಕೋಶಾಧ್ಯಕ್ಷರಾಗಿ ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಸದಸ್ಯರಾಗಿ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ, ಪೂಜ್ಯಶ್ರೀ ಮಾತೆ ಮಂಗಳಾದೇವಿ, ಪೂಜ್ಯ ಶ್ರೀಮಾತೆ ಬಸವರತ್ನಾದೇವಿ, ಪೂಜ್ಯ ಶ್ರೀ ಮಾತೆ ದಾನೇಶ್ವರಿದೇವಿ, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ, ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ ಮುಂತಾದ ತ್ಯಾಗಜೀವಿಗಳು ಹಗಲಿರುಳು ದುಡಿಯುತ್ತಿದ್ದಾರೆ.

ಬಸವ ಧರ್ಮ ಪೀಠ (ರಿ.) ಟ್ರಸ್ಟ್‌ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001ರಂದು ರಾಷ್ಟ್ರೀಯ ಹೆದ್ದಾರಿ 9ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಗಿದೆ. ಬಾಡಿಗೆ ಮನೆಯೊಂದನ್ನು ಪಡೆದುಕೊಂಡು ಕಾರ್ಯಾಲಯವನ್ನು ಸಹ ಅಂದೇ ತೆರೆಯಲಾಗಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.

ಬಸವ ಧರ್ಮ ಪೀಠ ಟ್ರಸ್ಟಿನ

ಬಸವ ಕಲ್ಯಾಣ ಶಾಖೆಯ ವತಿಯಿಂದ ಹಲವಾರು ಯೋಜನೆಗಳು

ಈ ಹಿನ್ನೆಲೆಯಲ್ಲಿ ಬಸವ ಧರ್ಮಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯ ವತಿಯಿಂದ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. **ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ**
2. **ನಿತ್ಯ ಪೂಜಾ ನಿಧಿ :** ಶ್ರೀ ಗುರುಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಕಳಿಸುವುದು. 600 ರೂ.
3. **ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು. 1200 ರೂ.
4. **ಬಸವಾಲಯ ನಿರ್ಮಾಣ :** ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು.
5. **ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ "ಬಸವ ಮಂಟಪ" ನಿರ್ಮಾಣಕ್ಕೆ 10,000ರೂ.ಗಳ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
6. **ಶರಣಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 60000 (ಅರವತ್ತು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 80000(ಎಂಬತ್ತು ಸಾವಿರ) ರೂ. ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು
7. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ. ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈ ತಕ್ಷಣದಲ್ಲಿ ಕೊಳವೆ ಬಾವಿ ತೋಡಿ ನೀರನ್ನು ಒದಗಿಸಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗುವುದು.

ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕಾದರೂ ಕಳಿಸಬಹುದು.

1. **ಬಸವ ಧರ್ಮ ಪೀಠ ,** ಶಾಖೆಯ ಕಾರ್ಯಾಲಯ, ಸಂತೋಷ ನಿಲಯ, ವಿದ್ಯಾಶ್ರೀ ಕಾಲನಿ, ತ್ರಿಪುರಾಂತ, ಬಸವಕಲ್ಯಾಣ - 585327. ತಾ- ಬಸವಕಲ್ಯಾಣ, ಜಿ-ಬೀದರ, ದೂರವಾಣಿ 08481-52856.
2. **ಬಸವ ಧರ್ಮಪೀಠ,** ಕೇಂದ್ರ ಸಂಸ್ಥೆ, ಮಹಾಮನೆ ಮಹಾಮಠ, ಶರಣ ಲೋಕ, ಕೂಡಲ ಸಂಗಮ 587115, ತಾ- ಹುನಗುಂದ ಜಿಲ್ಲೆ - ಬಾಗಲಕೋಟೆ. ದೂರವಾಣಿ : 08351-58038/ 58338/ 58007/ 58140.
3. **ಬಸವ ಧರ್ಮ ಪೀಠ :** ಶಾಖೆಯ ಕಾರ್ಯಾಲಯ, ಬಸವ ಮಂಟಪ, 2035, 20ನೇ ಮೇನ್, 2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು - 560 010. ದೂರವಾಣಿ : 080-3325335 / 3322790.

ಕೂಡಲಸಂಗಮದ ಮಹಾಮನೆ ಮಹಾಮಠ ನಿರ್ಮಾಣಕ್ಕಾಗಿ ಮತ್ತು ಬಸವ ಕಲ್ಯಾಣದ ಬಸವ ಮಹಾಮನೆಯ ನಿರ್ಮಾಣಕ್ಕಾಗಿ ಪ್ರತ್ಯೇಕ ರಸೀತಿ ಪುಸ್ತಕಗಳಿವೆ. ಕಾಣಿಕೆ ಕೊಡುವ ಉದ್ದೇಶವನ್ನು ಅನುಸರಿಸಿ ರಸೀತಿಯನ್ನು ಪಡೆದುಕೊಳ್ಳಿರಿ. ಇನ್‌ಕಮ್ ಟ್ಯಾಕ್ಸ್ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ. ಆಸಕ್ತರು ವಿವರಗಳನ್ನು ಕೇಳಿ ಪಡೆಯಬಹುದು. (E-mail:viswakalyana@lingayatism.com) ಕೆಲಸವು ಆದಷ್ಟು ಬೇಗನೆ ಪ್ರಾರಂಭವಾಗಲಿರುವುದರಿಂದ ಸಹೃದಯವಂತ ಧರ್ಮಾನುಯಾಯಿಗಳು ತನು, ಮನ, ಧನಗಳಿಂದ ಉದಾರವಾದ ಧನಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

ಬಸವಕಲ್ಯಾಣ - 585327.	**ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ**
ತಾ- ಬಸವ ಕಲ್ಯಾಣ, ಜಿಲ್ಲೆ - ಬೀದರ.	ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ

ಲಿಂಗಾಯತ (ಬಸವ) ಧರ್ಮದ ಷಟ್‌ಸೂತ್ರ ಘೋಷಣೆ


1.	ಧರ್ಮಗುರು	-	ವಿಶ್ವಗುರು ಬಸವಣ್ಣನವರು
2.	ಧರ್ಮಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.	ಧರ್ಮಲಾಂಛನ	:	ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4.	ಧರ್ಮಕ್ಷೇತ್ರ	:	ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ, ಶರಣ ಭೂಮಿ ಬಸವ ಕಲ್ಯಾಣ
5.	ಧರ್ಮಧ್ವಜ	:	ಇಷ್ಟಲಿಂಗ ಷಟ್‌ಕೋನ ಸಹಿತ ಬಸವ ಧ್ವಜ
6.	ಧರ್ಮದ ಧ್ಯೇಯ	:	ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಶರಣ ಸಮಾಜ ನಿರ್ಮಾಣ.




ಕರ್ನಾಟಕ ವಿಧಾನ ಪರಿಷತ್ ಉಪಸಭಾಪತಿ ಶ್ರೀ ಡೇವಿಡ್ ಸಿಮೆಯೋನ್ ಅವರಿಂದ
ಶರಣ ಮೇಳ ಉದ್ಘಾಟನೆ




ಉದ್ಘಾಟನಾ ಭಾಷಣ ಮಾಡುತ್ತಿರುವ ಶ್ರೀ ಡೇವಿಡ್ ಸಿಮೆಯೋನ್ ಅವರು.




ಆದಿಪ್ರಮಥ ಬಸವಣ್ಣನವರಿಗೆ ಪೂಜೆ.
ಶರಣೆ. ಪುಷ್ಪಾ ಗುರುಬಸಪ್ಪ ಮತ್ತು ಶರಣೆ. ಚಂದ್ರಮ್ಮ ಪಾಟೀಲ




ಜಂಗಮ ದೀಕ್ಷೆ ಪಡೆದುಕೊಂಡ
[illegible]




ಪೀಠಾರೋಹಣಕ್ಕೆ ಮೊದಲು ಲಿಂಗಾಯತ ಗಣಲಾಂಛನಕ್ಕೆ ಗೌರವಾರ್ಪಣೆ



ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿ
[illegible] ಗೌರವಾರ್ಪಣೆ



ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿಯವರಿಗೆ ದೇಶಭಕ್ತ ರತ್ನಪ್ಪ ಕುಂಬಾರ ಪಂಚಗಂಗಾ ಶುಗರ್ ಫ್ಯಾಕ್ಟರಿ ಅಧ್ಯಕ್ಷೆ ಶರಣೆ. ರಜನಿತಾಯಿ ವಿಶ್ವನಾಥ ಮಗದುಮ್ ಅವರಿಂದ ಆರತಿ.



ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿಯವರು



ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿಯವರು




ಪೂಜ್ಯ ಮಾತಾಜಿಯವರಿಗೆ ಜನ್ಮವಿತ್ತ ಶರಣೆ.
ಗಂಗಮ್ಮನವರಿಗೆ ಸಾಧಕ ವೃಂದದವರಿಂದ ಸತ್ಕಾರ



ರತ್ನ ಸಿಕ್ಕಿತಮ್ಮ ಹಾಡಿಗೆ ನೃತ್ಯ
ಕುಮಾರಿ ಮಮತಾ ಮುಮ್ಮಿಗಟ್ಟ ಮತ್ತು ಕುಮಾರಿ ಪ್ರತಿಭಾ ಗರಗ ಅವರಿಂದ.




ರತ್ನ ಸಿಕ್ಕಿತಮ್ಮ ಹಾಡಿಗೆ ನೃತ್ಯ
ಬೀದರಿನ ಇಬ್ಬರು ಪುಟಾಣಿಗಳಾದ ಸುಪ್ರಿಯ, ಲಿಂಗಪ್ರಿಯ ಅವರಿಂದ.




ದೇವ(ಭಾನು)ವಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತರಾದ
ಗಣನಾಯಕರು, ಗಣನಾಯಕಿಯರು.




ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತ ಸಮೂಹ.



ಗಣಲಿಂಗ ದರ್ಶನ ಶರಣ ಮೇಳದ ಧಾರ್ಮಿಕ ವಿಧಿಗಳಲ್ಲೊಂದು.




ಗಣಲಿಂಗಕ್ಕೆ ಆರತಿ ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರಿಂದ.



ಮಹಾಮನೆಯ ಮುಂಭಾಗದ ಮಹಡಿಯಲ್ಲಿ ಧ್ವಜವಂದನೆ ಮಾಡುತ್ತಿರುವ ಪೂಜ್ಯರು ಹಾಗೂ ಗಣನಾಯಕರು.




ಧ್ವಜ ವಂದನೆ ಮಾಡುತ್ತಿರುವ ಪೂಜ್ಯರು.




ಬಸವ ಧ್ವಜಾರೋಹಣದಲ್ಲಿ ಎದ್ದು ನಿಂತು ಧ್ವಜವಂದನೆ ಮಾಡುತ್ತಿರುವ ಶರಣ ಸಮೂಹ




ಧ್ವಜವಂದನೆ ಮಾಡುತ್ತಿರುವ ಗಣಾಚಾರ ದಳದ ಸದಸ್ಯರು.




ಸಮುದಾಯ ಪ್ರಾರ್ಥನೆಯ ಉದ್ಘಾಟನೆ, ಷಡ್‌ಗಣಾಧೀಶರಿಂದ.




ಪ್ರವಚನ ಆಲಿಸುತ್ತಿರುವ ಶರಣೆಯರ ಸಮೂಹ



ಬಸವ ಧರ್ಮ ಸಂಸ್ಥಾಪನಾ ದಿನಾಚರಣೆಯಂದು ಸಮುದಾಯ ಪ್ರಾರ್ಥನೆಯಲ್ಲಿ ಶರಣರು.



ಬಸವ ಧರ್ಮ ಸಂಸ್ಥಾಪನಾ ದಿನಾಚರಣೆಯಂದು ಸಮುದಾಯ ಪ್ರಾರ್ಥನೆಯಲ್ಲಿ ಶರಣೆಯರು.




ಬಸವೈಕ್ಯ ಮಂಟಪದ ಭವ್ಯ ನೋಟ



ಸುಮಂಗಲಿ ಸೇವಾಶ್ರಮದ ಮಕ್ಕಳಿಂದ ಬ್ಯಾಂಡ್ ವಾದನ



ಬಸವ ಸಾಗರ ಜಲಾಶಯದ ಸುಂದರ ನೋಟ




ಮೆರವಣಿಗೆಯಲ್ಲಿ ಬಣ್ಣದ ಛತ್ರಿಗಳ ಕುಣಿದಾಟ




ಮೆರವಣಿಗೆಯಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಸಕಲಟ್ಟಿ, ಕಾಟೇರಿ, ಕೋತಗಿರಿ ಮುಂತಾದ ಊರಿನ ಶರಣರು ಭಕ್ತಿ ಕುಣಿತದಲ್ಲಿ ತನ್ಮಯರು



ಬಾಲಕಿಯರಿಂದ ವೀರಗಾಸೆ ನೃತ್ಯ




ಬಸವೈಕ್ಯ ಮಂಟಪದಿಂದ ಮೆರವಣಿಗೆ-ಪಥ ಸಂಚಲನದಲ್ಲಿ ಆಗಮಿಸುತ್ತಿರುವ ಶರಣ ಸಮೂಹದ ಮಧ್ಯೆ ಪೂಜ್ಯ ಮಾತಾದ್ವಯರು




ಮೆರವಣಿಗೆ-ಪಥ ಸಂಚಲನದಲ್ಲಿ ಭಕ್ತ ಸಮೂಹ



ಮಂಗಳೂರಿನ ಬಳಿಯ ಬಿ.ಸಿ.ರೋಡಿನಲ್ಲಿ ನಿರ್ಮಾಣವಾಗಿರುವ
ಬಸವ ಮಂಟಪಕ್ಕೆ ಬಸವ ಮೂರ್ತಿಯ ಕೊಡುಗೆ




ಸುರೇಂದ್ರ ವೀರಪ್ಪ ಕೂಬಿಹಾಳ ಇವರಿಂದ "ವಿಶ್ವವಿಭೂತಿ ಬಸವಣ್ಣ" ಪುಸ್ತಕ ಬಿಡುಗಡೆ



ನೀಲಗಿರಿ ಜಿಲ್ಲೆಯ ಕಾಟೇರಿಯ ಶರಣ ಗುರುಬಸಪ್ಪನವರಿಗೆ ಸತ್ಕಾರ




ನೀಲಗಿರಿ ಜಿಲ್ಲೆಯ ಸಕಲಟ್ಟಿಯ ಶರಣ ಚಂದ್ರಶೇಖರ್ ಅವರಿಗೆ ಸತ್ಕಾರ




ಚಿಂತನಗೋಷ್ಠಿಯ ಉದ್ಘಾಟನೆ
ಬೀದರ ಜಿಲ್ಲೆಯ ಸಂಸತ್ ಸದಸ್ಯರಾದ ಡಾ. ರಾಮಚಂದ್ರ ವೀರಪ್ಪ ಅವರಿಂದ.




ಚಿಟಗುಪ್ಪಕ್ಕೆ ಮೊ [illegible] ಧರ್ಮ ಪತ್ರ ಪೂಜೆ




ಮುಂಬಯಿಯ ಉದ್ಯಮಿ ಆರ್.ಬಿ.ಹೆಬ್ಬಳ್ಳಿ ಅವರಿಂದ
ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಭಾವಚಿತ್ರ ಬಿಡುಗಡೆ




ಆರ್.ಬಿ. ಹೆಬ್ಬಳ್ಳಿ ಅವರಿಂದ ಚಿಂತನಗೋಷ್ಠಿಯ ಉದ್ಘಾಟನೆ



ಆಂಧ್ರಪ್ರದೇಶದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಸುಭಾಷ ಪಾಟೀಲ್‌ರಿಂದ " ತರಂಗಿಣಿ " ಹಿಂದಿ ಆವೃತ್ತಿಯ ಬಿಡುಗಡೆ



ಸುಭಾಷ ಪಾಟೀಲರಿಂದ ಸಮಾರೋಪ ಸಮಾರಂಭದ ಉದ್ಘಾಟನೆ



ಸರ್ವಜ್ಞ ಶರಣಧಾಮದಲ್ಲಿ ಕೊಠಡಿಯ ದಾನಿಗಳಾದ ಶರಣ. ಚಂದ್ರಸೇನ್, ಬೆಂಗಳೂರು ಇವರಿಗೆ ಸತ್ಕಾರ



[illegible]ಯಲ್ಲಿ ವೈದ್ಯ ವೃತ್ತಿ ಮಾಡುತ್ತ ಏಡ್ಸ್ ಚಿಕಿತ್ಸೆ ಕುರಿತು ವಿಶೇಷ ಸಂಶೋಧನೆ

॥ ಓಂ ಗುರು ಬಸವಲಿಂಗಾಯ ನಮಃ ॥

86666

ಕಾಯಕವೇ ಕೈಲಾಸ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಕಾಯಕದ ದಿನದ ಅಂಗವಾಗಿ ಮೊದಲನೆಯ

ಕಲ್ಯಾಣ ಪರ್ವ

2002ರ ಏಪ್ರಿಲ್ 30, ಮೇ 1 ಮತ್ತು 2ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15 ರವರೆಗೆ ನಡೆಸಿಕೊಂಡು ಬರಲಾಗುತ್ತಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗ ದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ರೂಪುರೇಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

> "ಕಪಿಲಸಿದ್ಧಮಲ್ಲಿಕಾರ್ಜುನಾ
> ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯಕಟ್ಟಿದಡೆ
> ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದುಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ. ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ. 1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196)ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ

ಭಕ್ತರು ಸಮಾವೇಶವಾಗಬೇಕೆಂದು ಇದೇ 2002ನೆಯ ಇಸವಿ ಏಪ್ರಿಲ್ 30, ಮೇ 1 ಮತ್ತು ಮೇ 2ರಂದು ಕಲ್ಯಾಣ ಪರ್ವ ಸಮಾಗಮವನ್ನು ಸಂಯೋಜಿಸಲಾಗಿದೆ. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ" "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರಸ್ಥಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲಿಯೇ. ಇಂಥ ಕಾಯಕದ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಏಪ್ರಿಲ್ 30, ಮೇ 1 ಮತ್ತು 2ರಂದು "ಕಲ್ಯಾಣ ಪರ್ವ" ವನ್ನು ನಡೆಸಲಾಗುತ್ತದೆ.

ಕಲ್ಯಾಣ ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಾನದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ) ಆದರ್ಶ ಕಲ್ಯಾಣ ರಾಜ್ಯ (welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 29ರ ರಾತ್ರಿಯಿಂದ ಮೇ 3ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ(ಊಟ) ಮಂಟಪ ಕಲ್ಯಾಣ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500ರೂ

5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.

6. ಪ್ರತಿನಿಧಿ ಶುಲ್ಕ : 100 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಕೊಡಬಹುದು.

ವಿಶೇಷ ಸೂಚನೆ : ವಾರ್ಷಿಕ ಸಮಾವೇಶವಾದ ಕಲ್ಯಾಣ ಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದವಟ್ಟು (ಎಫ್.ಡಿ) ಇಡಲು ದೇಣಿಗೆ ನೀಡಿದರೆ, ಈ ಪುದವಟ್ಟಿನ ಬಡ್ಡಿಯ ಹಣವನ್ನು ಗಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ವಿಶೇಷ ಮನವಿ :

ಶರಣ ಬಂಧುಗಳೇ, ಕರ್ನಾಟಕ ರಾಜ್ಯ ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲವನ್ನು ಎದುರಿಸುತ್ತಿದೆ. ಮಳೆಯ ಆಶ್ರಯದಲ್ಲಿ ವ್ಯವಸಾಯ ಮಾಡುವವರು, ಕೃಷಿಯ ಕೂಲಿಯನ್ನು ಅವಲಂಬಿಸಿರುವವರು ಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಶ್ರೀಮಂತರು, ಕಾಯಂ ಉದ್ಯೋಗಿಗಳು, ನೀರಾವರಿ ಕೃಷಿಯ ಅನುಕೂಲತೆಯುಳ್ಳವರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಅನ್ನ ದಾಸೋಹಕ್ಕೆ ತಮ್ಮ ಕಾಣಿಕೆಗಳನ್ನು ಸ್ವಯಂ ಪ್ರೇರಣೆಯಿಂದ ನೀಡಿ ಕಲ್ಯಾಣ ಪರ್ವದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಜ್ಯೋತಿಯಾತ್ರೆಯ ಯೋಜನೆ

ಶರಣ ಬಂಧುಗಳೇ,

ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅತ್ಯಂತ ನೋವಿನ ಪ್ರಸಂಗ ಕಲ್ಯಾಣ ಕ್ರಾಂತಿ. ಜಾತಿವರ್ಣ,ವರ್ಗರಹಿತ ಧರ್ಮಸಹಿತ ಶರಣ ಸಮಾಜವನ್ನು ಕಟ್ಟಬಯಸುವ ಬಸವಣ್ಣನವರ ಪ್ರಯತ್ನಕ್ಕೆ ಪೋಷಕವಾಗಿ ಧರ್ಮಪಿತ ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣ ಧರ್ಮ ಸ್ವೀಕರಿಸಿದ ಶರಣ ಮಧುವರಸರ ಮಗಳು ಲಾವಣ್ಯವತಿಯನ್ನು ಹುಟ್ಟಿನಿಂದ ಸಮಗಾರರಾಗಿ ಹರಳಯ್ಯನವರ ಮಗ ಶೀಲವಂತನಿಗೆ ವಿವಾಹ ಮಾಡಿಕೊಡಲು ಪ್ರೋತ್ಸಾಹ ನೀಡಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳರಾಜನನ್ನು ಪ್ರಚೋದಿಸಿ ಧರ್ಮಪಿತರನ್ನು ಗಡಿಪಾರು ಮಾಡಿಸಿದರು. ಧರ್ಮಗುರುವಿನ ನಿರ್ಗಮನಾನಂತರ ಹರಳಯ್ಯ-ಮಧುವರಸರ-ಶೀಲವಂತರ ಕಣ್ಣು ಕೀಳಿಸಿ ಆನೆ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ಕೊಲ್ಲಿಸಲಾಯಿತು. ಅಸಂಖ್ಯಾತ ಶರಣರು ರಚಿಸಿದ ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನವಾಗಿದ್ದ ವಚನ ವಾಙ್ಮಯವನ್ನು ನಾಶಮಾಡಲು ಸಂಪ್ರದಾಯವಾದಿಗಳು ಯತ್ನಿಸಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಾಯಕತ್ವ ವಹಿಸಿ ವಚನ ಸಾಹಿತ್ಯವನ್ನು ಕಲ್ಯಾಣದಿಂದ ಹೊರಗೆ ಸಾಗಿಸಿದ್ದಲ್ಲದೆ ಬೆನ್ನು ಹತ್ತಿ ಬಂದ ಸೈನ್ಯದೊಡನೆ ಕಾದಿ ವಚನ ಸಾಹಿತ್ಯವನ್ನು ಸಹ್ಯಾದ್ರಿಯ ಬೆಟ್ಟಗಳ ಗರ್ಭದಲ್ಲಿದ್ದ ಗುಹೆಗಳಲ್ಲಿ

ಇಟ್ಟು ಸಂರಕ್ಷಿಸಿದರು. ಆದಿ ಶರಣರ ಆ ಋಣವನ್ನು ತೀರಿಸಲು ಎಷ್ಟು ಜನ್ಮಗಳ ಕಾಲ ದುಡಿದರೂ ಸಾಲದು. ಕಲ್ಯಾಣದಿಂದ ಹೊರಟು ಧರ್ಮಪಿತರು ಕೂಡಲ ಸಂಗಮಕ್ಕೆ ಹೋದರೆ, ಮಾಚಿದೇವರು ಸಹ್ಯಾದ್ರಿಯತ್ತ ಸಾಗಿದರು. ಕಲ್ಯಾಣದಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮತ್ತು ವೀರಮಾತೆ ಅಕ್ಕನಾಗಲಾಂಬಿಕೆ ಸೊನ್ನಲಾಪುರಕ್ಕೆ ತೆರಳಿ ಶೂನ್ಯ ಪೀಠದ ಅಧಿಕಾರವನ್ನು ವಹಿಸಿಕೊಟ್ಟು ಧರ್ಮ ವಿಸ್ತರಣೆಯ ಹೊಣೆಯನ್ನು ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಹಸ್ತಾಂತರಿಸಿ ತಾವೂ ಸಹ್ಯಾದ್ರಿಯತ್ತ ಸಾಗಿದರು. ಜಗನ್ಮಾತಾ ಅಕ್ಕಮಹಾದೇವಿ, ಶೂನ್ಯ ಪೀಠಾಧೀಶ ಅಲ್ಲಮಪ್ರಭುಗಳು ಕದಳಿಗೆ ಹೋದರು. ಅಕ್ಕನಾಗಲಾಂಬಿಕೆಯ ಗದ್ದುಗೆ ತರೀಕೆರೆಯಲ್ಲಿದೆ. ಹರಳಯ್ಯನವರು ಮಾಡಿದ ಪಾದುಕೆಗಳು ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ ಗ್ರಾಮದಲ್ಲಿವೆ. ಆದ್ದರಿಂದ ಕೂಡಲಸಂಗಮ, ಉಳಿವೆ, ತರೀಕೆರೆ, ಕದಳಿ, ಬಿಜನಳ್ಳಿ ಮತ್ತು ಸೊನ್ನಲಾಪುರ (ಸೊಲ್ಲಾಪುರ) ದಿಂದ ಆರು ಜ್ಯೋತಿ ಯಾತ್ರೆಗಳನ್ನು ನಿಯೋಜಿಸಿ ಬಸವ ಜ್ಯೋತಿ, ಚನ್ನಬಸವ ಜ್ಯೋತಿ, ಅಕ್ಕ ನಾಗಲಾಂಬಿಕಾ ಜ್ಯೋತಿ, ಅಕ್ಕ-ಅಲ್ಲಮಜ್ಯೋತಿ, ಹರಳಯ್ಯ ಜ್ಯೋತಿ ಮತ್ತು ಸಿದ್ಧರಾಮ ಜ್ಯೋತಿಗಳನ್ನು ಆ ಸ್ಥಳಗಳಿಂದ ತಂದು ಮೊಟ್ಟಮೊದಲನೆಯ ಕಲ್ಯಾಣ ಪರ್ವ ಕಾರ್ಯಕ್ರಮದ ಉದ್ಘಾಟನಾ ಜ್ಯೋತಿಯನ್ನು ಉದ್ದೀಪಿಸುವ ಪ್ರೇರಣೆ ಉಂಟಾಗಿವೆ.

ಆದ್ದರಿಂದ ಈ ಪವಿತ್ರವಾದ ಜ್ಯೋತಿ ಯಾತ್ರೆಯಲ್ಲಿ ಭಾಗಿಗಳಾಗಿ ಆದಿ ಶರಣರಿಗೆ ತಮ್ಮ ಕೃತಜ್ಞತೆ ಸಲ್ಲಿಸುವ ಅಪೇಕ್ಷೆಯುಳ್ಳ ಶರಣ ಬಂಧುಗಳು ತಮ್ಮ ಹೆಸರನ್ನು ನೋಂದಾಯಿಸಬೇಕೆಂದು ಸೂಚಿಸುತ್ತೇವೆ. ಕ್ರಮಿಸಬೇಕಾದ ದೂರವನ್ನು ಗಮನದಲ್ಲಿಟ್ಟುಕೊಂಡು ಜ್ಯೋತಿಯಾತ್ರೆ ಹೊರಡುವ ದಿನಾಂಕ ಮತ್ತು ಅವಧಿಯನ್ನು ನಿಶ್ಚಯಿಸಲಾಗುವುದು. ಈ ಕರಪತ್ರವನ್ನು ನೋಡಿ ಪ್ರೇರಿತರಾದ ಶರಣ ಬಂಧುಗಳು ತಾವೂ ಪತ್ರ ಬರೆದು ತಿಳಿಸಬಹುದು.

ಏಪ್ರಿಲ್ 30, ಮೇ 1-2ರಂದು ಶರಣಭೂಮಿ ಬಸವ ಕಲ್ಯಾಣದಲ್ಲಿ ನಡೆಯಲಿರುವ ಕಲ್ಯಾಣ ಪರ್ವ

ಇದರ ನಿಮಿತ್ತ ಜ್ಯೋತಿ ಯಾತ್ರೆ ಮತ್ತು ಪಾದಯಾತ್ರೆ

2002ನೆಯ ಇಸವಿ ಏಪ್ರಿಲ್ 30, ಮೇ 1 ಮತ್ತು 3ರಂದು ಶರಣ ಭೂಮಿ ಬಸವ ಕಲ್ಯಾಣದಲ್ಲಿ "ಕಲ್ಯಾಣಪರ್ವ" ಎಂಬ ಬೃಹತ್ ಸಮಾವೇಶವನ್ನು ಏರ್ಪಡಿಸಲು ಸಂಕಲ್ಪಿಸಿ, 15ನೆಯ ಶರಣ ಮೇಳದಲ್ಲಿ ಘೋಷಿಸಲಾಗಿದೆ.

ಆದಿ ಶರಣರು ವರ್ಣಾಂತರ ವಿವಾಹದಲ್ಲಿ ಭಾಗಿಯಾದುದಕ್ಕಾಗಿ ಸಂಪ್ರದಾಯವಾದಿಗಳಿಂದ ಅತೀವ ಸಂಕಷ್ಟ ಅನುಭವಿಸಿ 12ನೆಯ ಶತಮಾನದಲ್ಲಿ ಕಲ್ಯಾಣದಿಂದ ನಿರ್ಗಮಿಸಿದರು. ಧರ್ಮಪಿತರು ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ಗಡಿಪಾರು ಶಿಕ್ಷೆ ಹೊತ್ತು ಕಲ್ಯಾಣವನ್ನು ತೊರೆದರು. ತ್ಯಾಗಜೀವಿಗಳಾದ

ಹರಳಯ್ಯ ಮಧುವರಸ- ಶೀಲವಂತರು, ಎಳೆಹೊಟೆ ಶಿಕ್ಷೆಗೆ ಪಕ್ಕಾಗಿ ಹುತಾತ್ಮರಾದರು. ವಚನ ವಾಙ್ಮಯ ರಕ್ಷಣೆಗಾಗಿ ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ಪಣತೊಟ್ಟು ಕಲ್ಯಾಣವನ್ನು ನಿರ್ಗಮಿಸಿದರು. ಆವರೆಗೂ ಕೈಲಾಸವನ್ನು ನಾಚಿಸುವಂತಿದ್ದ ಕಲ್ಯಾಣವು ಕಟುಕರ ಕೇರಿಯಾಯಿತು. ಅಸಂಖ್ಯಾತ ಶರಣರ ಬಲಿದಾನವಾಯಿತು. ನೊಂದು ನಿರ್ಗಮಿಸಿದ ಆದಿ ಶರಣರ ಸಂಕಲ್ಪ ಈಡೇರಿಸಲಿಕ್ಕಾಗಿ 21ನೆಯ ಶತಮಾನದ ಈ ಸಂಧಿ ಕಾಲದಲ್ಲಿ ನಾವು ನೀವೆಲ್ಲರೂ ಪ್ರಯತ್ನಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕಲ್ಯಾಣಕ್ರಾಂತಿಯಲ್ಲಿ ಪ್ರಮುಖಪಾತ್ರ ನಿರ್ವಹಿಸಿದ ಶರಣರ ಸ್ಥಾನಗಳಿಂದ ಬಸವ ಜ್ಯೋತಿಯಾತ್ರೆಯನ್ನು ಮತ್ತು ಪಾದಯಾತ್ರೆಯನ್ನು ಹೊರಡಿಸಲು ನಿರ್ಧರಿಸಲಾಗಿದೆ.

1. ಧರ್ಮಕ್ಷೇತ್ರ ಕೂಡಲ ಸಂಗಮದಿಂದ :

ಕಲ್ಯಾಣದಿಂದ ಗಡಿಪಾರಾಗಿ ಹೊರಟ ಧರ್ಮಪಿತ ಬಸವಣ್ಣನವರು ಬಂದು ನೆಲಸಿ ಶ್ರಾವಣಶುದ್ಧ ಪಂಚಮಿಯಂದು ಲಿಂಗೈಕ್ಯರಾದುದು ಕೂಡಲ ಸಂಗಮದಲ್ಲಿ. ಆದ್ದರಿಂದ ಬಸವ ಜ್ಯೋತಿಯನ್ನು ಕೂಡಲಸಂಗಮದಿಂದ ಹೊರಡಿಸಲಾಗುತ್ತಿದೆ.

ನೇತೃತ್ವ : ಪೂಜ್ಯಶ್ರೀ ಬಸವ ಕುಮಾರ ಸ್ವಾಮಿಗಳು, ಸಂಚಾಲಕರು : ಶರಣ ಡಿ. ಶಿವಕುಮಾರ್ ಲಿಂಗಾಯತ್

ಹೊರಡುವ ದಿನಾಂಕ : 25-3-2002

ಈ ದಿವಸದ ಮಹತ್ವ : ಧರ್ಮಪಿತರು ಗಡಿಪಾರಾಗಿ ಕಲ್ಯಾಣದಿಂದ ಹೊರಟುದು. ಫಾಲ್ಗುಣ ಮಾಸದ ಶುದ್ಧ ದ್ವಾದಶಿಯಂದು. ದ್ವಾದಶಿಯ ದಿ. 25-3-2002ರಂದು ಬರುತ್ತಲಿದೆ.

2. ಸುಕ್ಷೇತ್ರ ಉಳವಿಯ ಮಹಾಮನೆಯಿಂದ :

ವಚನ ವಾಙ್ಮಯವನ್ನು ರಕ್ಷಿಸುತ್ತ ಶರಣರು ಸಹ್ಯಾದ್ರಿಯ ಗರ್ಭದಲ್ಲಿದ್ದ ಗವಿಗಳನ್ನು ಆಶ್ರಯಿಸಿದರು. ಚನ್ನಬಸವಣ್ಣನವರು ವಸತಿಗೆ ಆಯ್ದುಕೊಂಡ ಪ್ರದೇಶ ಉಳಿವೆ (Camp) ಎಂದು ಖ್ಯಾತವಾಯಿತು. ವಿಶಾಲವಾದ ಗವಿಯೊಂದಕ್ಕೆ ಮಹಾಮನೆ ಎಂದು ಹೆಸರಿಟ್ಟರು.

ಹರಭಜನೆ ಗುರುಸೇವೆ ಉರುತರದಿ ಮಾಡುತಲಿ ಶರಣ ಗಣ ಕೂಡಿ ಉಳಿವೆಯೊಳು ।
ಮರುದಿನವೆ ಮೆರೆಸಿದರು ತತ್ತ್ವ ಮಂಟಪವ ॥ ಚನ್ನಬಸವೇಶ್ವರನು ಉನ್ನತಾನುಭಾವಿಗಳು
ಚೆನ್ನವಾಯಿತು ಆ ಉಳಿವೇ ಲಿಂಗಿಗಳ ಕನ್ನೆ ಭಕ್ತಿಯ ಗೂಡಾತು ॥

ಅಲ್ಲಿ ಪುನಃ ಜ್ಞಾನಬೋಧೆ, ದಾಸೋಹ ಪ್ರಾರಂಭವಾಯಿತು. ಅಂಥ ಮಹಾಮನೆಯ ಗವಿಯಿಂದ ದಿ. 27-2-2002ರಂದು ಚನ್ನಬಸವ ಜ್ಯೋತಿ ಯಾತ್ರೆಯು ಪ್ರಾಂಭವಾಗುವುದು ದಿ. 27-2-2002 ಚನ್ನಹುಣ್ಣಿಮೆಯಂದು ಆರಂಭವಾಗುವ ಈ ಯಾತ್ರೆಯು ಉಳಿವೆಯಲ್ಲಿರುವ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಗದ್ದುಗೆಯ ದರ್ಶನ ಪಡೆದು

ಮುಂದೆ ಸಾಗುವುದು.

ನೇತೃತ್ವ: ಪೂಜ್ಯಶ್ರೀ ಚನ್ನಬಸವರಾಜ ಸ್ವಾಮಿಯವರದು

ಹೊರಡುವ ದಿನಾಂಕ : 27-02-2002

ಹೊರಡುವ ಸ್ಥಳ : ಮಹಾಮನೆಯ ಗವಿ

3. ವೀರಮಾತೆ ಅಕ್ಕನಾಗಲಾಂಬಿಕೆಯ ಗದ್ದುಗೆಯಿಂದ

ವಿಶ್ವಗುರು ಬಸವಣ್ಣನವರ ಜೀವನ, ಮಹಾಮನೆಯ ದಾಸೋಹ, ಕಲ್ಯಾಣಕ್ರಾಂತಿ, ವಚನ ವಾಙ್ಮಯ ರಕ್ಷಣೆ, ಬಸವ ಧರ್ಮ ಪ್ರಚಾರ - ಈ ಮಹತ್ವದ ಕಾರ್ಯ ವಿಸ್ತಾರದಲ್ಲಿ ಪ್ರಮುಖ ಪಾತ್ರ ವಹಿಸಿದ ತಾಯಿ ವೀರಮಾತೆ ಅಕ್ಕನಾಗಲಾಂಬಿಕೆ. ಶ್ರೀಗುರು ಬಸವಣ್ಣನವರ ಹಿಂದಿನ ಪ್ರೇರಕ ಶಕ್ತಿ ಮಾತ್ರವಲ್ಲ ತಾಯಿ ಅಕ್ಕನಾಗಲಾಂಬಿಕೆ ಧೀರ ಧರ್ಮ ಪ್ರಚಾರಕಿ. ಆ ತಾಯಿ ಅನೇಕ ಬಾರಿ ಅಶ್ವಾರೋಹಿಯಾಗಿ ಆಂಧ್ರ, ಮಹಾರಾಷ್ಟ್ರಗಳಲ್ಲಿ ಸಂಚರಿಸಿ, ಧರ್ಮಪ್ರಚಾರ ಮಾಡಿ ಬಂದುದನ್ನು, ಯಶಸ್ವಿ ಪ್ರಚಾರ ಯಾತ್ರೆ ಮುಗಿಸಿ ಬಂದಾಗ ನಾಗಲಾಂಬಿಕೆಗೆ ಭವ್ಯ ಮತ್ತು ವೀರೋಜಿತ ಸ್ವಾಗತವನ್ನು ಶರಣರು ಮಾತ್ರವಲ್ಲ ಬಿಜ್ಜಳನ ಅಂತಃಪುರದ ಪರಿವಾರದವರು ಸಹ ನೀಡಿದ ಬಗ್ಗೆ ಕಾಲಜ್ಞಾನ ವಚನಗಳಲ್ಲಿ ಉಲ್ಲೇಖವಿದೆ. ಗುರು ಮತ್ತು ಸೋದರ ಎರಡೂ ಆಗಿದ್ದ ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದರು. ಮಗ ಚನ್ನಬಸವಣ್ಣನವರು ಕಣ್ಣೆದುರಿಗೇ ಲಿಂಗೈಕ್ಯರಾದರು. ಆದರೂ ಆ ತಾಯಿ ಎದೆಗೆಡಲಿಲ್ಲ. 75ರ ವೃದ್ಧಾಪ್ಯದಲ್ಲಿ ವಚನ ವಾಙ್ಮಯ ರಕ್ಷಣೆಗಾಗಿ. ಖಡ್ಗ ಹಿಡಿದು ಹೋರಾಟ ಮಾಡಿದುದೇ ಅಲ್ಲದೆ ಚನ್ನಬಸವಣ್ಣನವರ ಲಿಂಗೈಕ್ಯದ ನಂತರ ಪುನಃ ಸಂಚರಿಸಿ ಧರ್ಮಪ್ರಚಾರ ಮಾಡಿದಳು. ಆದ್ದರಿಂದ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿರುವ ಅಕ್ಕನಾಗಲಾಂಬಿಕೆಯ ಗದ್ದುಗೆಯಿಂದ ಅಕ್ಕನಾಗಲಾಂಬಿಕಾ ಜ್ಯೋತಿಯನ್ನು ಹೊರಡಿಸಲಾಗುವುದು.

ನೇತೃತ್ವ : ಪೂಜ್ಯಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರದು

ಹೊರಡುವ ದಿನಾಂಕ : 27-2-2002 (ಚನ್ನಹುಣ್ಣಿಮೆಯಿಂದ)

ಹೊರಡುವ ಸ್ಥಳ : ಅಕ್ಕನಾಗಲಾಂಬಿಕೆಯ ಗದ್ದುಗೆ, ತರೀಕೆರೆ

ಈ ಜ್ಯೋತಿಯು ಮಾರ್ಗ ಮಧ್ಯೆ ಉಡುತಡಿ, ಬಳ್ಳಿಗಾವಿಗಳನ್ನು ಸಂದರ್ಶಿಸಿ ಅಕ್ಕಮಹಾದೇವಿ, ಅಲ್ಲಮಪ್ರಭುಗಳಿಗೆ ಗೌರವವನ್ನು ಸಲ್ಲಿಸಿ, ಅಕ್ಕ-ಅಲ್ಲಮ ಜ್ಯೋತಿಗಳನ್ನೂ ತರಲಿದೆ.

4. ಸೊಲ್ಲಾಪುರ :

ಸಿದ್ಧರಾಮೇಶ್ವರ ಜ್ಯೋತಿಯು ಸೊಲ್ಲಾಪುರದಿಂದ ಹೊರಡುವುದು. ಇಲ್ಲಿಂದ ಬಸವ ಕಲ್ಯಾಣವು ಕೇವಲ 120 ಕಿಲೋಮೀಟರ್ ದೂರವಿದೆ. ಆದ್ದರಿಂದ ಜ್ಯೋತಿಯು ಹೊರಡುವ ದಿನಾಂಕ ಕಲ್ಯಾಣ ಕಿರಣದ ಮಾರ್ಚ್ ಸಂಚಿಕೆಯಲ್ಲಿ ಕೊಡಲಾಗುವುದು.

ನೇತೃತ್ವ : ಪೂಜ್ಯಶ್ರೀ ಮಾತೆ ಮಂಗಳಾದೇವಿ

ಹೊರಡುವ ಸ್ಥಳ : ಶ್ರೀ ಸಿದ್ಧರಾಮೇಶ್ವರ ಶರಣಾಲಯ

5. ಬಿಜನಹಳ್ಳಿ :

ಹುತಾತ್ಮ ಶರಣ ಹರಳಯ್ಯನವರು ತಮ್ಮ ಮೈಚರ್ಮವನ್ನು ತೆಗೆದು ಮಾಡಿದ ಚಮ್ಮಾವುಗೆಗಳಿರುವ ಸ್ಥಳ ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ, ಇಲ್ಲಿಂದ ಹರಳಯ್ಯ ಜ್ಯೋತಿಯು ಹೊರಡಲಿದೆ.

ಜಗನ್ಮಾತಾ ಅಕ್ಕಮಹಾದೇವಿ ಮತ್ತು ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು ಲಿಂಗೈಕ್ಯರಾದ ತಾಣ ಕದಳಿಯ ಗವಿ ಅಲ್ಲಿಂದ ಅಕ್ಕ ಅಲ್ಲಮ ಜ್ಯೋತಿಗಳನ್ನು ಹೊರಡಿಸಲಾಗುವುದು.

ಉಳಿವೆ ಮತ್ತು ತರೀಕೆರೆ ಬಹಳ ದೂರದ ಪ್ರದೇಶಗಳಾದ್ದರಿಂದ ಪಾದಯಾತ್ರೆ, ಪ್ರಚಾರ ಕಾರ್ಯಕ್ಕೆ ಸಮಯವು ಸಾಕಾಗುತ್ತಿಲ್ಲ. (ಜ್ಯೋತಿಯಾತ್ರೆಗೆ ವಾಹನಗಳನ್ನೂ ಸಿದ್ಧಪಡಿಸಬೇಕಿದೆ) ಆದ್ದರಿಂದ ಕೂಡಲ ಸಂಗಮ, ಉಳಿವೆ ಮತ್ತು ತರೀಕೆರೆಯಿಂದ ಹೊರಡುವ ಬಸವ, ಚನ್ನಬಸವ, ಅಕ್ಕನಾಗಮ್ಮ ಜ್ಯೋತಿಯಾತ್ರೆಯನ್ನು ವಾಹನಗಳಲ್ಲಿ ಕುಳಿತು ಸಂಚರಿಸುವಂತೆ ಮಾಡಿ, ಬಸವ ಕಲ್ಯಾಣಕ್ಕೆ ಸಮೀಪದಲ್ಲಿರುವ ಸೊಲ್ಲಾಪುರ, ಬಿಜನಳ್ಳಿ, ಕದಳೀಯಾತ್ರೆಯನ್ನು ಪಾದಯಾತ್ರೆಯನ್ನಾಗಿ ಮಾಡಲು ಆಲೋಚಿಸಲಾಗುತ್ತಿದೆ. ಬಿಜನಳ್ಳಿಯಿಂದ ಹೊರಡುವ ಹರಳಯ್ಯ ಜ್ಯೋತಿಯ ಪಾದಯಾತ್ರೆಯ ಜವಾಬ್ದಾರಿಯನ್ನು ಗುಲಬರ್ಗಾ ರಾಷ್ಟ್ರೀಯ ಬಸವ ದಳ ಶರಣರು ವಹಿಸಿಕೊಂಡಿದ್ದಾರೆ. ಕದಳಿಯಿಂದ ಹೊರಡುವ ಪಾದಯಾತ್ರೆ ಜವಾಬ್ದಾರಿಯನ್ನು ಆಂಧ್ರಪ್ರದೇಶದ ಮಹಬೂಬ್ ನಗರದ ಶರಣರು ವಹಿಸಿಕೊಂಡಿದ್ದಾರೆ.

ವಿ.ಸೂ : ಕದಳಿಯ ವಿಚಾರವನ್ನು ನಾವು ಶರಣ ಮೇಳದಲ್ಲಿ ಪ್ರಸ್ತಾಪ ಮಾಡುತ್ತಲೇ ಕೆಲವು ಶರಣರು ಜ್ಯೋತಿ ಹೊರಡುವ ಸಮಯವನ್ನು ತಿಳಿಸಲು ಕೇಳಿದರು. ತಾವೂ ಕದಳಿಯ ಸಂದರ್ಶನ ಮಾಡುವುದಾಗಿ ನುಡಿದರು. ಕದಳಿಯ ಸಂದರ್ಶನಕ್ಕೆ ಈ ತಿಂಗಳುಗಳು ಅಷ್ಟೊಂದು ಸೂಕ್ತವಾಗಲಿಕ್ಕಿಲ್ಲ. ಏಕೆಂದರೆ ಬಿಸಿಲು ಬಹಳ ಮತ್ತು ಕದಳಿಯ ವನದ ಬಳಿ ಹರಿಯುವ ಹಳ್ಳದಲ್ಲಿ ನೀರು ಬತ್ತಿರುತ್ತದೆ. ಬೇಸಿಗೆಯ ಮುಂಚಿನ ದಿನಗಳಲ್ಲಿ ಹೋಗಿ ಬರುವುದು ಸೂಕ್ತ.

ಕೆಲವು ವಿಶೇಷ ಮಾಹಿತಿ

ಬಸವ ಕಲ್ಯಾಣವು ಹೈದರಾಬಾದ್-ಮುಂಬಯಿಯ ಹೆದ್ದಾರಿಗೆ ಸಮೀಪ (6 ಕಿ.ಮಿ.) ದಲ್ಲಿದೆ . ರೇಲ್ವೆ ಮೂಲಕ ಬರುವವರು ಹೈದರಾಬಾದ್ (185 ಕಿ.ಮಿ.) ಗುಲಬರ್ಗಾ (85ಕಿ.ಮಿ.) ಭಾಲ್ಕಿ (35 ಕಿ.ಮಿ.) ಗಳಿಗೆ ಬಂದು ಕಲ್ಯಾಣವನ್ನು ತಲುಪಬಹುದು. ಗುಲಬರ್ಗಾ ಮಾರ್ಗವಾಗಿ ಬರುವವರಿಗೆ ಗುಲಬರ್ಗಾ ರಾಷ್ಟ್ರೀಯ ಬಸವ ದಳದವರು ಬಸವ ಮಂಟಪದಲ್ಲಿ ತಂಗಲು, ಸ್ನಾನ-ಪೂಜೆ-ಉಪಹಾರ ಮಾಡಲು ವ್ಯವಸ್ಥೆ ಮಾಡಲು ಉತ್ಸುಕರಾಗಿದ್ದಾರೆ. ಶರಣ ಮೇಳದಲ್ಲಿ ಬಹಿರಂಗವಾಗಿಯೇ ಆಹ್ವಾನ ನೀಡಿದ್ದಾರೆ. ಕಲಬುರ್ಗಿಗೆ ಬಂದು ಅಲ್ಲಿ ಶರಣ ಬಸವೇಶ್ವರ ಶರಣಾಲಯ ಸಂದರ್ಶಿಸಿ ಜನರು ಬಸವ

ಕಲ್ಯಾಣದತ್ತ ಸಾಗಬಹುದು. ಕಲಬುರ್ಗಿಗೆ ಕಲ್ಯಾಣದ ಹೆಬ್ಬಾಗಿಲು, ಕಡೆಯ ಕಲ್ಯಾಣ ಎಂಬ ಅನ್ವರ್ಥನಾಮಗಳಿವೆ.

ವಿಳಾಸ :

ರಾಷ್ಟ್ರೀಯ ಬಸವದಳ, ಬಸವ ಮಂಟಪ, ಮಹಾಂತನಗರ, ಕಲಬುರ್ಗಿ
ಡಾ॥ ಟಿ.ಎ. ಪಾಟೀಲ ಮನೆ ಹತ್ತಿರ
ದೂರವಾಣಿ : ಶರಣ ಶಂಕರಪ್ಪ ಮಹಾಂತಗೋಳ್, ಕಾರ್ಯಾಧ್ಯಕ್ಷರು (48434), ಆರ್. ಶೆಟಗಾರ್, ಕಾರ್ಯದರ್ಶಿ (21425)

ಬಸವಜ್ಯೋತಿ ಯಾತ್ರೆಯ ವ್ಯವಸ್ಥೆ

ಇದು ಪರ್ವ (Transition) ಕಾಲ. 12ನೆಯ ಶತಮಾನದ ನಮ್ಮ ಆದಿ ಶರಣರು ಗೈದ ಸಾಧನೆ ನೀಡಿದ ಸಾಹಿತ್ಯ, ತತ್ತ್ವಗಳ ಪ್ರತಿಷ್ಠಾಪನೆಗಾಗಿ ಮಾಡಿದ ಬಲಿದಾನ ಅಸಾಮಾನ್ಯ. ಆ ಶರಣರ ಸಂಕಲ್ಪ ಈಡೇರಿಸಬೇಕಾದುದು ಅನುಯಾಯಿಗಳಾದ ನಮ್ಮ-ನಿಮ್ಮೆಲ್ಲರ ಕರ್ತವ್ಯ. ಶರಣರ ಸಂದೇಶವನ್ನು ಸಾರಲು ಶ್ರಮದಾಯಕವಾದರೂ ಬಸವ ಜ್ಯೋತಿ ಯಾತ್ರೆ ಅತ್ಯುತ್ತಮ ಸಾಧನ. ಬಸವ ಧರ್ಮಪೀಠದ ತ್ಯಾಗಿಗಳು ಶ್ರಮವಾದರೂ ಚಿಂತೆಯಿಲ್ಲ. ಆದಿ ಶರಣರ ಸಂದೇಶ ಸಾರಲು ಉತ್ಸುಕರಾಗಿದ್ದಾರೆ. ಈ ದಿಶೆಯಲ್ಲಿ ನಿಮ್ಮಗಳದೂ ಮಹತ್ವ ಪಾತ್ರವಾಗಬೇಕು.

1. ಎಷ್ಟು ಜನರು, ಎಷ್ಟು ದಿವಸಗಳ ಕಾಲ ಜ್ಯೋತಿಯಾತ್ರೆಯಲ್ಲಿ ಭಾಗವಹಿಸಲು ಸಾಧ್ಯವೋ ಅಷ್ಟು ದಿನ ಭಾಗವಹಿಸಿರಿ. ಪಾದಯಾತ್ರೆ ಕೇವಲ ಒಂದು ಊರನ್ನು ಪ್ರವೇಶ ಮಾಡುವಾಗ ಮಾತ್ರ. ಉಳಿದಂತೆ ವಾಹನದಲ್ಲಿ ಸಂಚಾರ.

2. ಈ ಕಲ್ಯಾಣ ಕಿರಣದಲ್ಲಿ ಜ್ಯೋತಿಗಳು ಸಂಚರಿಸುವ ಮಾರ್ಗವನ್ನು ಕೊಡಲಾಗಿದೆ. ಆ ಊರುಗಳಲ್ಲಿ ಜ್ಯೋತಿಗೆ ಸ್ವಾಗತ ಏರ್ಪಡಿಸಬೇಕು ಮತ್ತು ಊರುಗಳ ಮಧ್ಯಭಾಗದ ಬಯಲಿನಲ್ಲಿ ಸಭೆಯನ್ನು ಏರ್ಪಡಿಸಬೇಕು. ಇದಕ್ಕಾಗಿ ರಾಷ್ಟ್ರೀಯ ಬಸವದಳದವರು ಮತ್ತು ಇನ್ನಿತರ ಆಸಕ್ತರು ಪುರಪ್ರಮುಖರನ್ನು ಸಂದರ್ಶಿಸಿ, ಆಹ್ವಾನಿಸಿ, ಸ್ಥಳೀಯವಾಗಿ ಕಾರ್ಯಕ್ರಮ ಪತ್ರ ಪ್ರಕಟಿಸಿ, ಹಂಚಿ, ಪ್ರಚಾರ ಮಾಡಬೇಕು. ಪುರಸಭಾಧ್ಯಕ್ಷರು, ನಗರಸಭಾಧ್ಯಕ್ಷರು, ಸಾಮಾಜಿಕ, ಧಾರ್ಮಿಕ, ರಾಜಕೀಯ ಗಣ್ಯರನ್ನು ಆಹ್ವಾನಿಸಬೇಕು.

3. ಸಮಯಾವಕಾಶ ಲಭ್ಯವಿದ್ದಂತೆ ಆಯಾ ಊರುಗಳಲ್ಲಿ ಜ್ಯೋತಿಯಾತ್ರೆಯೊಡನೆ ಸೇರಿಕೊಳ್ಳಬಹುದು.

4. 15ನೆಯ ಶರಣ ಮೇಳದಲ್ಲಿ ಕಲ್ಯಾಣ (ಗಣ) ಪರ್ವದ ಬಗ್ಗೆ ತಿಳಿಸಿರುವುದರಿಂದ ಇಲ್ಲಿ ಬಂದ ಜನ ಮತ್ತು 6 ಜ್ಯೋತಿಗಳು ಸಂಚರಿಸುವ ಕಾರಣ ಹೊಸಹೊಸ ಪ್ರದೇಶಗಳ ಜನ ಬಸವ ಕಲ್ಯಾಣದ ಸಮಾವೇಶಕ್ಕೆ ಬರಲಿದ್ದಾರೆ. ಆದ್ದರಿಂದ ವ್ಯವಸ್ಥೆಗಾಗಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಸಂಗ್ರಹಿಸಲು ಪ್ರಯತ್ನಿಸಬೇಕು. ಜ್ಯೋತಿಯು ಆಗಮಿಸಿದಾಗ ನಿಧಿ ಸಮರ್ಪಣೆ ಮಾಡಬಹುದು. ಇಲ್ಲವೇ ಬಸವ ಕಲ್ಯಾಣದ ಗಣಪರ್ವಕ್ಕೆ ಬಂದಾಗಲೂ ಸಂಗ್ರಹಿಸಿದ ಹಣ ಕೊಡಬಹುದು.

ಆದ್ದರಿಂದ ಕಲ್ಯಾಣಕಿರಣ ಓದುತ್ತಲೇ ದೇಣಿಗೆ ಸಂಗ್ರಹಕ್ಕಾಗಿ ರಸೀತಿ ಪುಸ್ತಕ, ಕರಪತ್ರ, ಕಳಿಸಲು ಪತ್ರ ಬರೆಯಿರಿ. ಯಾವಯಾವ ಊರುಗಳಲ್ಲಿ ಜ್ಯೋತಿಯಾತ್ರೆಗೆ ಸ್ವಾಗತ ಮತ್ತು ಸಭೆ ಏರ್ಪಡಿಸಲು ಸಾಧ್ಯ ಎಂಬುದನ್ನೂ ತಿಳಿಸಿರಿ. ನಿಮ್ಮ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಕೊಡಿರಿ. ಬಸವ ಕಲ್ಯಾಣದ ವಿಳಾಸದಲ್ಲಿಯೂ ರಸೀತಿ ಪುಸ್ತಕ, ಕರಪತ್ರ, ಭಿತ್ತಿಪತ್ರ ಸಿಗುತ್ತವೆ. ಕಾರ್ಯಕ್ರಮ ವ್ಯವಸ್ಥೆಗಾಗಿ ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಸಂಪರ್ಕಿಸಿರಿ.

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 10.

ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585327.
ದೂರವಾಣಿ : 08481-52856

ತರೀಕೆರೆ - ಬಸವಕಲ್ಯಾಣ ಜ್ಯೋತಿ ಯಾತ್ರೆ

27-2-2002	ಬಳ್ಳಿಗಾವಿ	19.	ತುಮಕೂರು
28-2-2002	ಶಿರಾಳಕೊಪ್ಪ	20.	ಕೊರಟಗೆರೆ
1.	ಉಡುತಡಿ, ಶಿಕಾರಿಪುರ	21.	ಮಧುಗಿರಿ
2.	ಶಿವಮೊಗ್ಗ	22.	ಶಿರಾ, ಹಿರಿಯೂರು
3.	ಭದ್ರಾವತಿ	23.	ಚಿತ್ರದುರ್ಗ
4.	ತರೀಕೆರೆ	24.	ಚಳ್ಳಕೆರೆ
5.	ಲಿಂಗದಹಳ್ಳಿ, ನಂದಿ	25.	ದೊಡ್ಡಉಳ್ಳರ್ತಿ
6.	ಕಡೂರು	26.	ಕಲ್ಯಾಣ ದುರ್ಗ
7.	ಸಕ್ಕರೆಪಟ್ಟಣ	27.	ರಾಯದುರ್ಗ, ಮೊಳಕಾಲ್ಮೂರು
	ಉದ್ದೇಬೋರನಹಳ್ಳಿ	28.	ಗುಡೇಕೋಟೆ
8.	ಚಿಕ್ಕಮಗಳೂರು	29.	ರಾಂಪುರ
9.	ಸಕಲೇಶಪುರ	30.	ಬಳ್ಳಾರಿ
10.	ಹಾಸನ	31.	,, (ಕುಡುತನಿ)
11.	ಚನ್ನರಾಯಪಟ್ಟಣ	1.	ಹೊಸಪೇಟೆ
12.	ಮಂಡ್ಯ	2.	ಕೊಪ್ಪಳ
13.	ಚನ್ನಪಟ್ಟಣ	3.	ಅಳವಂಡಿ
14.	ರಾಮನಗರ	4.	ಗಂಗಾವತಿ
15.	ಬೆಂಗಳೂರು	5.	ಸಿದ್ದಾಪುರ
16.	ವಿಜಯಪುರ	6.	ಸಿರಗುಪ್ಪ
17.	ದೇವನಹಳ್ಳಿ	7.	ಸಿಂಧನೂರು
18.	ದೊಡ್ಡಬಳ್ಳಾಪುರ	8.	ಮಾನ್ವಿ

9.	ನೀರ ಮಾನ್ವಿ, ರಾಯಚೂರು	20.	ನಿಡಗುಂದಾ
10.	ಶಕ್ತಿನಗರ	21.	ಚಿಂಚೋಳಿ
11.	ಗಬ್ಬೂರು	22.	ನಿರ್ಣಾ
12.	ದೇವದುರ್ಗ	23.	ಜಹೀರಾಬಾದ್
13.	ವಾಡಗೇರಾ	24.	ಬೀದರ್
14.	ಯಾದಗಿರಿ	25.	ಹಲಬರ್ಗಾ
15.	ಯಡಹಳ್ಳಿ, ಹಂದರಗಿ	26.	ಬಾಲ್ಕಿ
16.	ಚಿತ್ತಾಪುರ	27.	ಹಲಸೂರು
17.	ಗುಲಬರ್ಗಾ	28.	ಬಂದವರ ಓಣಿ
18.	ಬಿಜನಳ್ಳಿ	29.	ಬಸವ ಕಲ್ಯಾಣ
19.	ಸೇಡಂ		

ತಾರೀಖಿನಲ್ಲಿ ಅಥವಾ ಊರುಗಳಲ್ಲಿ ಕೆಲವು ಬದಲಾವಣೆ ಆದರೂ ಆಗಬಹುದು. ಮುಂದಿನ ಸಂಚಿಕೆಯಲ್ಲಿ ಖಚಿತವಾದ ವಿವರ ನೀಡಲಾಗುವುದು.

ಕೂಡಲಸಂಗಮ - ಬಸವಕಲ್ಯಾಣ ಜ್ಯೋತಿ ಯಾತ್ರೆ

1. 25-3-2002	ಕೂಡಲಸಂಗಮ	13.	ನಿಂಬಾಳ್
26	ಬೆಳಗಲ್	14.	ಇಂಡಿ
27.	ಇದ್ದಲಗಿ	15.	ಲಚ್ಯಾಣ
28.	ಧನ್ನೂರು	16.	ಮಣ್ಣೂರ
29.	ಮರೋಳ	17.	ಕರ್ಜಿ
30.	ತಂಗಡಗಿ	18.	ಅಫಜಲಪುರ
31.	ಮುದ್ದೇಬಿಹಾಳ	19.	ಬಾಲರ್ಗಿ
1.	ಡವಳಗಿ	20.	ದುಧನಿ
2.	ಹೂವಿನ ಹಿಪ್ಪರಗಿ	21.	ನಿಂಬರ್ಗಾ
3.	ಬಸವನ ಬಾಗೇವಾಡಿ	22.	ಮಾದನ ಹಿಪ್ಪರಗಿ
4.	ಇಂಗಳೇಶ್ವರ	23.	ಆಳಂದ
5.	ಮನಗೂಳಿ	24.	ನರೋಣ
6.	ಬಿಜಾಪುರ	25.	ಸಲಗರ್
7.	ಕವಳಗಿ	26.	ಹಾರಕೂಡ
8.	ಕಗ್ಗೋಡ	27.	ಭೋಸಗಾ
9.	ಹಡಗಲಿ	28.	ಹಂದರಾಳ
10.	ನಾಗಠಾಣ	29.	ಮಾತಾಳ, ಬಂದವರ ಓಣಿ
11.	ಅತರ್ಗ	30.	ಬಸವ ಕಲ್ಯಾಣ
12.	ರೂಗಿ		

ಉಳವಿ ಬಸವಕಲ್ಯಾಣ ಜ್ಯೋತಿ ಯಾತ್ರೆ

27-2-2002	ಉಳವಿ(ಮಹಾಮನೆ)	30.	ಖಿಡಕೋಳ
28-2-2002	ಉಳವಿ	31.	ಗೋಕಾಕ
29	ಜೋಯಿಡಾ	1-4-02	ಹಿಡಕಲ್
1.	ಕುಂಬಾರವಾಡ	2.	ಅಂಕಲಗಿ
2.	ಪಟೋಳಿ	3.	ಬೆಳಗಾಂವ್
3.	ಅಂಬಿಕಾನಗರ	4.	ಕಾಕತಿ
4.	ದಾಂಡೇಲಿ	5.	ಹತ್ತರಕಿ
5.	ಖಿದ್ರಾ	6.	ಸಂಕೇಶ್ವರ
6.	ಗಣೇಶಗುಡಿ	7.	ನಿಪ್ಪಾಣಿ
7.	ಸೂಪಾ	8.	ಗಡ್ಹಿಂಗ್ಲಾಜ್
8.	ಲೊಂಡಾ	9.	ಹುಕ್ಕೇರಿ
9.	ರಾಮನಗರ	10.	ಘಟಪ್ರಭಾ
10.	ಹಳ್ಯಾಳ	11.	ಮೂಡಲಗಿ
11.	ಉಣಕಲ್ಲ	12.	ತೇರದಾಳ
12.	ಧಾರವಾಡ	13.	ಉಗಾರಖಿರ್ದ
13.	ಅಳ್ನಾವರ	14.	ಮೀರಜ್
14.	ಲಿಂಗನಮಠ	15.	ಅಥಣಿ
15.	ಕಕ್ಕೇರಿ	16.	ಬನಹಟ್ಟಿ
16.	ಖಾನಾಪೂರ	17.	ಮಹಾಲಿಂಗಪುರ
17.	ನಂದಗಡ	18.	ಮುಧೋಳ್
18.	ಹಲಸಗಿ	19.	ಜಮಖಂಡಿ
19.	ಬೀಡಿ	20.	ದೇವರ ಹಿಪ್ಪರಗಿ
20.	ಇಟಗಿ	21.	ಸಿಂದಗಿ
21.	ಕಾದರವಳ್ಳಿ	22.	ಮೋರಟಗಿ
22.	ಎಂ.ಕೆ. ಹುಬ್ಬಳ್ಳಿ	23.	ಜೇವರಗಿ
23.	ಶುಗರ್ ಪ್ಯಾಕ್ಟರಿ	24.	ಗುಲ್ಬರ್ಗ
24.	ಹಿರೇಬಾಗೇವಾಡಿ	25.	ಮಹಾಗಾಂವ್
25.	ಗೊಡಚಿ	26.	ಕಮಲಾಪುರ
26.	ಮುರಗೋಡ	27.	ಹಳ್ಳಿಖೇಡ
27.	ಬೈಲಹೊಂಗಲ	28.	ಹುಮ್ನಾಬಾದ್
28.	ತಲ್ಲೂರ	29.	ಬಂದವರ ಓಣಿ
29.	ಯರಗಟ್ಟಿ		

ಕೂಡಲ ಸಂಗಮಕ್ಕೆ ಬಂದು ಹೋಗುವ ಬಸ್ಸುಗಳ ವಿವರ

ಅಥಣಿ	ಬೆಳಿಗೆ	6.45
ಬಾಗಲಕೋಟೆ	ಬೆಳಿಗ್ಗೆ	5.30, 6.00, 6.30, 6.45, 7.30, 8.00, 9.00, 10.00, 12.30, 16.00, 18.00
ಬಸವ ಕಲ್ಯಾಣ	ಬೆಳಿಗೆ	6.00
ಭಾಲ್ಕಿ	ಬೆಳಿಗ್ಗೆ	6.00
ಬಿಜಾಪುರ	ಬೆಳಿಗ್ಗೆ	6.00
ಬೈಲಹೊಂಗಲ	ಬೆಳಿಗ್ಗೆ	6.00
ಬಾದಾಮಿ	ಬೆಳಿಗ್ಗೆ	6.00
ಬೆಳಗಾಂವ	ಬೆಳಿಗ್ಗೆ	6.00
ಬಳ್ಳಾರಿ	ಬೆಳಿಗ್ಗೆ	6.00
ದಾವಣಗೆರೆ	ಬೆಳಿಗ್ಗೆ	8.00
ಧಾರವಾಡ	ಬೆಳಿಗ್ಗೆ	6.30
ಹಾವೇರಿ	ಬೆಳಿಗ್ಗೆ	6.00
ಹುನಗುಂದ	ಬೆಳಿಗ್ಗೆ	9.30, ಮಧ್ಯಾಹ್ನ 12.30, 1.30, 4.00, ಸಂಜೆ 6.00
ಹುಬ್ಬಳ್ಳಿ	ಮಧ್ಯಾಹ್ನ	13.45 ವಯಾ ಬಾಗಲಕೋಟೆ
ಖಾನಾಪುರ	ಬೆಳಿಗೆ	6.00
ಕೂಡ್ಲಿಗಿ	ಬೆಳಿಗ್ಗೆ	6.00
ಲಿಂಗಸೂರು	ಬೆಳಿಗ್ಗೆ	6.00
ಸವದತ್ತಿ	ಬೆಳಿಗ್ಗೆ	6.00

ಈ ಜಿಲ್ಲೆಯ ಸಚಿವರ ಅಸಮರ್ಥತೆ ಎಷ್ಟೆಂದರೆ ಕನ್ನಡಿಗರ ರಾಜಧಾನಿ ಬೆಂಗಳೂರಿನಿಂದ ಅತ್ಯಂತ ಮಹತ್ವದ ಕ್ಷೇತ್ರ, ಕೂಡಲ ಸಂಗಮಕ್ಕೆ ಒಂದು ನೇರ ಬಸ್ಸಿಲ್ಲ. ಅಂದಾಗ ಉತ್ತರ ಕರ್ನಾಟಕ ಇಂಥ ಅಸಮರ್ಥ ಸಚಿವರುಗಳಿಂದ ಹೇಗೆ ಮುಂದುವರಿಯಲು ಸಾಧ್ಯ ಎಂಬುದೇ ಜನಸಮೂಹದ ಪ್ರಶ್ನೆ!

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಬಸವ ತತ್ವ ಪರೀಕ್ಷೆಗಳು 2001 (ಬಸವ ಶಕೆ 868)

ಫಲಿತಾಂಶ

ಶರಣರಾದ		
	ಒಂದನೆಯ ವರ್ಗ	
123	ಪ್ರಭುಲಿಂಗ ವೈಜನಾಥ ರಾಜಗಿರೆ	(ಬೀದರ ಕೇಂದ್ರ)
127	ಚನ್ನವೀರ ಬಸವರಾಜ ಸಂಗಮದ	,,
128	ಸಿದ್ಧವೀರ ಬಸವರಾಜ ಸಂಗಮದ	,,
129	ಚೇತನಾ ಬಸವರಾಜ ಸಂಗಮದ	,,
	ಎರಡನೆಯ ವರ್ಗ	
130	ಪಲ್ಲವಿ ಮಲ್ಲಿಕಾರ್ಜುನ ಶಹಾಪುರ	(ಬೀದರ ಕೇಂದ್ರ)
136	ಗಿರೀಶ ಶಿವಕುಮಾರ ಪಾಟೀಲ	(ಬೀದರ ಕೇಂದ್ರ)
137	ಸುಮಿತ್ರಾ ಶಿವಕುಮಾರ ಪಾಟೀಲ	(ಬೀದರ ಕೇಂದ್ರ)
	ಮೂರನೆಯ ವರ್ಗ	
103	ದೀಪಿಕಾ ಬಸವಲಿಂಗಪ್ಪ ಬೆಂಡಿಗೇರಿ	(ಬೀದರ ಕೇಂದ್ರ)
134	ರಾಜೇಶ್ವರಿ ಕಂಟೆಪ್ಪ ಶೆಟಕಾರ	(ಬೀದರ ಕೇಂದ್ರ)
140	ಭಾಗ್ಯಶ್ರೀ ಅಣ್ಣೆಪ್ಪ ವಠಾರ	(ಬೀದರ ಕೇಂದ್ರ)
141	ಜಗದೀಶ ಅಮೃತಪ್ಪ ಕೊಡ್ಲಿ	(ಬೀದರ ಕೇಂದ್ರ)

142	ಅಶ್ವಿನಿ ಶಿಪುತ್ರಪ್ಪ ಕೊಡ್ಲಿ	(ಬೀದರ ಕೇಂದ್ರ)
143	ಮಲ್ಲಿಕಾರ್ಜುನ ಶಿವಪುತ್ರಪ್ಪ ಕೊಡ್ಲಿ	(ಬೀದರ ಕೇಂದ್ರ)
144	ಕೆ. ಆಶಾಲತಾ ಮಂಜುನಾಥ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
145	ಬಿ. ತ್ರಿವೇಣಿ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
146	ಎಸ್. ಸುಜಾತಮ್ಮ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
147	ಎಸ್.ಎನ್. ಆಶಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
148	ಜಿ. ವಿಕಾಸ ಪಾಟೀಲ್	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
149	ಎಸ್.ಓ. ಮಂಜುಳಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
150	ಕೆ.ಇ. ಆಶಾಲತಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
152	ಎನ್. ಶಿವಾನಂದ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
154	ಜಿ.ಎಸ್. ರಾಘವೇಂದ್ರ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
159	ಜಿ. ರೂಪಮ್ಮ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
161	ಕೆ.ಪಿ. ನೇತ್ರಾವತಿ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)

ಬಸವ ತತ್ವ ಪರಿಚಯ (ಎರಡನೆಯ ಪರೀಕ್ಷೆ)

ಮೂರನೆಯ ವರ್ಗ

202	ವಿದ್ಯಾವತಿ ವಿಜಯಕುಮಾರ ಕಮನೂರಿ	(ಬೆಳಗಾವಿ ಕೇಂದ್ರ)
206	ಎಮ್. ಲಕ್ಷ್ಮೀದೇವಿ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
207	ಜಿ. ಮಮತಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
208	ಎಮ್. ಮಂಜುನಾಥ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
209	ಟಿ. ಶ್ವೇತಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
210	ಆರ್. ಎರ್ರಿಸ್ವಾಮಿ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
211	ಎಸ್.ಎಲ್. ಮಂಜುಳಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)
212	ಜಿ. ಕವಿತಾ	(ಚಿತ್ರದುರ್ಗ ಜಿಲ್ಲೆ, ಓಬಳಾಪುರಕೇಂದ್ರ)

ಬಸವ ತತ್ವ ಪ್ರವೀಣ (ಮೂರನೆಯ ಪರೀಕ್ಷೆ)

ಎರಡನೆಯ ವರ್ಗ

303 ಸವಿತಾ ಅಡಿವೆಪ್ಪ ಸಿದ್ನಾಳ (ಬೆಳಗಾವಿ ಕೇಂದ್ರ)

ಮೂರನೆಯ ವರ್ಗ

304 ರಾಮಪ್ಪ ದುಂಡಪ್ಪ ಮುಷ್ಪಗಿ (ಬೆಳಗಾವಿ ಕೇಂದ್ರ)

ಬಸವ ತತ್ವ ಪ್ರಕಾಶ (ನಾಲ್ಕನೆಯ ಪರೀಕ್ಷೆ)


ಮೂರನೆಯ ವರ್ಗ

ಶಿವಬಸವ ರುದ್ರಪ್ಪ ಕುಕಡೊಳ್ಳಿ (ಬೆಳಗಾವಿ ಕೇಂದ್ರ)

ಹುಬ್ಬಳ್ಳಿ 16-11-2001


ಶೋಭಾದೇವಿ ಪರಮಾದಿ, ನಿರ್ದೇಶಕರು,
ಶ್ರೀ ಬಸವೇಶ್ವರ ದಿವ್ಯಜ್ಞಾನ, ವಿದ್ಯಾಲಯ,
ಹುಬ್ಬಳ್ಳಿ-24. ದೂರವಾಣಿ (0836) 306106

(ಸೂ. ಮುಂಬರುವ ಪರೀಕ್ಷೆಗಳು 2002ನೇ ಇಸ್ವಿ ಆಗಸ್ಟ್‌ನಲ್ಲಿ. ಅರ್ಜಿ ಸ್ವೀಕಾರ 30-6-02ರೊಳಗೆ)



ಬಸವ ಧರ್ಮ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನಡೆಯುವ
ಸಮುದಾಯ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಪೂಜ್ಯರು, ಗಣನಾಯಕ-ನಾಯಕಿಯರು

ಕಲ್ಯಾಣ ಕಿರಣ CPMG/KA/BGW-50 ಫೆಬ್ರವರಿ - 2002
R.NO 19980/70 WPP (W) -17



ಸಮುದಾಯ ಪ್ರಾರ್ಥನೆಗೆ ಮೊದಲು
ಬಸವ ಧ್ವಜಾರೋಹಣಕ್ಕೆ ಸಿದ್ಧವಾಗಿ ನಿಂತ ಶರಣ ಸಮೂಹ